(ಸಭೆಯು 1-42 ಕ್ಕೆ ಮುಕ್ತಾಯಗೊಂಡಿತು. ಮತ್ತೆ ಸಭೆಯ 3-00 ಗಂಟೆಗೆ ಸಮಾವೇಶಗೊಳ್ಳುತ್ತದೆ).

(ಸಭೆಯು 3-18 ಕ್ಕೆ ಪುನಃ ಸಮಾವೇಶಗೊಂಡಿತು)

(ಉಪಾಧ್ಯಕ್ಷರು ಅಧ್ಯಕ್ಷಪೀಠವನ್ನು ಅಲಂಕರಿಸಿದರು)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷಿಣಿಯವರೆ, ರಾಜ್ಯದಲ್ಲಿ ಗಣೇಶ ಉತ್ಸವದ ಕಾಲದಲ್ಲಿ ಆಗಿರತಕ್ಕಂಥ ಗಂಭೀರವಾದಂಥ ಪರಿಸ್ಥಿತಿಯ ಬಗ್ಗೆ ಮಾನ್ಯ ಸಚಿವರು ಹೇಳಿಕೆ ಕೊಡಬೇಕೆಂದು ಈ ಸದನದಲ್ಲಿ ನಿನ್ನೆ ದಿವಸ ತೀರ್ಮಾನ ಆಗಿತ್ತು.

ಉಪಾಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಈಗ ಒಂದು ಪ್ರಕಟಣೆ ಇದೆ. ಅದನ್ನು ಹೇಳುತ್ತೇನೆ. ಆ ಮೇಲೆ ತಾವುಗಳು ಮಾತನಾಡಬಹುದು.

ಪ್ರಕಟಣೆ

ದಿನಾಂಕ 26ನೇ ಸೆಪ್ಟಂಬರ್ 1991 ರಂದು ವಿಧಾನಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯು ಸಭೆ ಸೇರಿ ಈ ಕೆಳಕಂಡ ಕಾರ್ಯಕಲಾಪಗಳನ್ನು ನಡೆಸಬೇಕೆಂದು ತೀರ್ಮಾನಿಸಲಾಯಿತು.

28-9-91 (ಶನಿವಾರ) :: ಅಧಿವೇಶನ ಇರುವುದಿಲ್ಲ

29-9-91 (ಭಾನುವಾರ) :: ರಜಾದಿನ

30-9-91 (ಸೋಮವಾರ):: ಶಾಸನ ರಚನೆಯ ಕಾರ್ಯಕಲಾಪಗಳು

ಶ್ರೀ ವಾಟಾಳ್ ನಾಗರಾಜ್ : ಗಣೇಶೋತ್ಸವ ಸಂದರ್ಭದಲ್ಲಿ ಬೆಳಗಾವಿ, ಹುಬ್ಬಳ್ಳಿ, ಚನ್ನಪಟ್ಟಣ ಮುಂತಾದ ಕಡೆಗಳಲ್ಲಿ ಆಗಿರತಕ್ಕಂಥ ಘಟನೆಗಳ ಬಗ್ಗೆ ಸರಕಾರದವರು ಹೇಳಿಕೆ ಕೊಡುತ್ತೇವೆ ಎಂದು ಹೇಳಿದ್ದಾರೆ. ಈ ಘಟನೆಯಲ್ಲಿ ಸಾಕಷ್ಟು ಜನರಿಗೆ ತೊಂದರೆಯಾಗಿದೆ. ಸಂತ್ರಸ್ಥರಿಗೆ ಪರಿಹಾರ ಕೊಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಅನೇಕ ಜನರಿಗೆ ಇನ್ನೂ ಪರಿಹಾರವನ್ನು ಕೊಟ್ಟಿಲ್ಲ. ಪರಿಸ್ಥಿತಿಯು ಬಹಳ ತೊಂದರೆದಾಯಕವಾಗಿರುತ್ತದೆ. ಅಲ್ಲಿ ಕೆಲವರನ್ನು ದಸ್ತಗಿರಿ ಮಾಡಿದ್ದಾರೆ, ಅವರನ್ನು ಇನ್ನು ಬಿಡುಗಡೆ ಮಾಡಿಲ್ಲ, ಅನೇಕ ಜನ ನಿರಪರಾಧಿಗಳನ್ನು ದಸ್ತಗಿರಿ ಮಾಡಿದ್ದಾರೆ, ಅವರನ್ನು ಇನ್ನೂ ಬಿಡುಗಡೆ ಮಾಡಿಲ್ಲ. ಅನೇಕ ಜನ ನಿರಪರಾಧಿಗಳನ್ನು ದಸ್ತಗಿರಿ ಮಾಡಿದ್ದಾರೆ, ಅವರನ್ನು ಬಿಡುಗಡೆ ಮಾಡುವ ಬಗ್ಗೆ ಹೇಳಿಕೆ ಕೊಡಬೇಕು ಹೀಗಾಗಿ ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ಗಂಭೀರ ಪರಿಸ್ಥಿತಿಯು ಇದೆ.

ಈ ಬಗ್ಗೆ ಸರ್ಕಾರ ಏನು ಕ್ರಮವನ್ನು ಕೈಗೊಂಡಿದೆ. ಎನ್ನುವುದು ಒಂದು. ಮತ್ತು ರಾಜ್ಯ ಮಟ್ಟದ ಶಾಂತಿ ಸಮಿತಿಯ ಬಗ್ಗೆ ಈಗಾಗಲೇ ಹೋದ ಸಭೆಯಲ್ಲಿ ನಾನು ಹೇಳಿದ್ದೇನೆ.ಶಾಂತಿ ಸಮಿತಿಯ ಬಗ್ಗೆ ರಾಜ್ಯಮಟ್ಟದಲ್ಲಿ ಆಗಿದೆ. ಜಿಲ್ಲಾಮಟ್ಟದಲ್ಲಿ ಆಗಿಲ್ಲ, ತಾಲ್ಲೂಕು ಮಟ್ಟದಲ್ಲಿಯೂ ಆಗಿಲ್ಲ. ಆದುದರಿಂದ ಜಿಲ್ಲಾಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಸಮಿತಿಯನ್ನು ಯಾವಾಗ ಮಾಡುತ್ತೀರಿ? ಆ ಸಮಿತಿಗಳಿಗೆ ಎಲ್ಲಾ ವರ್ಗದ ಎಲ್ಲಾ ಕೋಮಿನ ಮತ್ತು ಧಾರ್ಮಿಕ ಮುಖಂಡರುಗಳು ಬೇರೆ ಬೇರೆ ಎಲ್ಲರನ್ನೂ ಸೇರಿಸಿ ಈ ಸಮಿತಿಯನ್ನು

ರಚನೆ ಮಾಡಬೇಕು ಎನ್ನತಕ್ಕಂಥದ್ದನ್ನು ಸರ್ಕಾರ ತತ್ವಶಃ ಒಪ್ಪಿಕೊಂಡಿರತಕ್ಕಂಥ ನೀತಿ. ಆದುದರಿಂದ ಸರ್ಕಾರ ಈ ಸಮಿತಿಯನ್ನುಯಾವಾಗ ರಚನೆ ಮಾಡುತ್ತೀರಿ? ಕೊನೆಗೆ ಬೆಂಕಿ ಹತ್ತಿದ ಮೇಲೆ ನಾವು ನೀರು ತರುವುದಕ್ಕೆ ಹೋಗುವುದು ಬೇಡ. ಬೆಂಕಿ ಹಚ್ಚುವುದಕ್ಕ ಮುಂಚಿಯೇ ಶಮನ ಮಾಡುವುದಕ್ಕೆ ಮೊದಲೇ ನಾವು ವ್ಯವಸ್ಥಿತವಾಗಿ ಶಾಂತಿ ಸಮಿತಿಗಳನ್ನು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಮಾಡತಕ್ಕಂಥ ವ್ಯವಸ್ಥೆ ಆಗತಕ್ಕಂಥದ್ದು ಮತ್ತು ಈ ಸಮಗ್ರವಾದಂಥ ಈಗ ನಡೆದಿರತಕ್ಕಂಥ ಈ ಗಂಬೀರವಾದ ಪರಿಸ್ಥಿತಿಗೆ ಸರ್ಕಾರದಲ್ಲಿ ಏನೇನು ಮಾಹಿತಿ ಇದೆ ಎನ್ನುವುದನ್ನು ಮಾನ್ಯಮಂತ್ರಿಗಳು ಹೇಳಬೇಕು ಎಂದು ನಾನು ತಮ್ಮ ಮೂಲಕ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ (ಗೃಹಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಇತ್ತೀಚೆಗೆ ನಡೆದ ಈದ್ ಮಿಲಾದ್ ಮತ್ತು ಗಣೇಶ ಪ್ರತಿಮೆ ವಿಸರ್ಜನೆ ಮೆರವಣಿಗೆಗಳು ನಡೆದಾಗ ದುರದೃಷ್ಟವಶಾತ್ ಬೆಳಗಾಂ, ಹುಬ್ಬಳ್ಳಿ, ಚನ್ನಪಟ್ಟಣ, ಮತ್ತು ಗುಲ್ಬರ್ಗಾ ಜಿಲ್ಲೆಯ ಯದ್ರಾಮಿ ಸ್ಥಳಗಳಲ್ಲಿ ನಡೆದ ಗುಂಪು ಘರ್ಷಣೆಗಳ ಬಗ್ಗೆ ಈ ಎರಡೂ ಸದನಗಳ ಮಾನ್ಯ ಸದಸ್ಯರುಗಳು ತೀವ್ರ ಕಳಕಳಿಯಿಂದ ಈ ವಿಷಯವನ್ನು ಪ್ರಸ್ತಾಪಿಸಿ ವಿವರಗಳನ್ನು ಪಡೆಯಲು ಇಚ್ಛಿಸಿದರು. ವಿವರಗಳನ್ನು ಪಡೆದು, ಹೇಳಿಕೆ ನೀಡುವುದಾಗಿ ನಾನು ಆಶ್ವಾಸನೆ ನೀಡಿದ್ದೆ.

ಮಾನ್ಯ ಅಧ್ಯಕ್ಷರೇ, ವಿವರಗಳು ಹೀಗಿವೆ.

ಪ್ರತಿವರ್ಷದಂತೆ, ಈ ವರ್ಷವೂ ಸಹ ಗಣೇಶ ಹಬ್ಬವು ದಿನಾಂಕ 11-9-91ರಿಂದ ಪ್ರಾರಂಭವಾಯಿತು. ದಿನಾಂಕ 12 ರಿಂದಲೇ ಶುರುವಾಗಿ ವಿವಿಧ ಸ್ಥಳಗಳಲ್ಲಿ ಬೇರೆ ಬೇರೆ ದಿನ ಗಣೇಶ ಪ್ರತಿಮೆಯನ್ನು ವಿಸರ್ಜಿಸುವ ಕಾರ್ಯಕ್ರಮವೂ ನಡೆಯಿತು. ಇಡೀ ರಾಜ್ಯದಲ್ಲಿ ಸಾವಿರಾರು ಕಡೆ ಈ ವಿನಾಯಕನ ವಿಸರ್ಜನೆ ಉತ್ಸಾಹ, ಸಂತೋಷದಿಂದ ಮತ್ತು ಸಂಪೂರ್ಣ ಮತೀಯ ಸೌಹಾರ್ಧತೆಯಿಂದ ನಡೆದುಕೊಂಡು ಬಂದಿತ್ತು.

ಈ ವರ್ಷ ಈದ್ ಮಿಲಾದ್ ಮತ್ತು ಗಣೇಶ ವಿಸರ್ಜನಾ ಕಾರ್ಯಕ್ರಮಗಳ ಆಚರಣೆ ಒಂದೇ ದಿನ ಎಂದರೆ ದಿನಾಂಕ 22-9-91ರಂದು ಕೆಲವು ಸ್ಥಳಗಳಲ್ಲಿ ಗೊತ್ತುಮಾಡಲಾಗಿತ್ತು. ಈ ಹಿನ್ನೆಲೆಯನ್ನೂ ಗಮನದಲ್ಲಿಟ್ಟುಕೊಂಡು ನಾನು ಹಬ್ಬಗಳಿಗೆ ಕೆಲ ದಿನ ಮುಂಚೆಯೇ ಉನ್ನತ ಪೋಲೀಸ್ ಅಧಿಕಾರಿಗಳ ಸಭೆಯೊಂದನ್ನು ಕರೆದು, ಪೂರ್ವಭಾವಿಯಾಗಿ ಸಮೀಕ್ಷಿಸಿ, ಈ ವಿಷಯದಲ್ಲಿ ತೆಗೆದುಕೊಳ್ಳಬೇಕಾದ ಮುಂಜಾಗರೂಕ ತಾ ಕ್ರಮಗಳನ್ನು ಗೊತ್ತುಪಡಿಸಿ, ಇಡೀ ರಾಜ್ಯದ ಎಲ್ಲ ಪೋಲಿಸ್ ಅಧಿಕಾರಿಗಳಿಗೂ ಪೂರ್ವಭಾವಿ ಸೂಚನೆಗಳನ್ನು ಕೊಡುವ ಏರ್ಪಾಡು ಮಾಡಿದ್ದೆ.

ಮಾನ್ಯ ಅಧ್ಯಕ್ಷರೇ, ಇಡೀ ರಾಜ್ಯದಲ್ಲಿ ಈ ಸಂತೋಷದ ಹಬ್ಬಗಳ ಕಾರ್ಯಾಚರಣೆ ಬಹುಮಟ್ಟಿಗೆ ಶಾಂತಿಯುತವಾಗಿ, ಸಾಂಪ್ರದಾಯಿಕ ರೀತಿಯಲ್ಲಿ ನಡೆದಿದ್ದರೂ, ದುರದೃಷ್ಟ ವಶಾತ್ ಬೆಳಗಾಂ, ಹುಬ್ಬಳ್ಳಿ, ಚನ್ನಪಟ್ಟಣ ಮತ್ತು ಯಡ್ರಾಮಿಯಲ್ಲಿ ಕೆಲವು ಅಹಿತಕರ ಘಟನೆಗಳು ನಡೆದವು.

ದಿನಾಂಕ 19-9-91 ರಂದು ರಾತ್ರಿ ಚನ್ನಪಟ್ಟಣ ಟೌನ್‌ನಲ್ಲಿ ಕೋಟೆ ಭಾಗದಲ್ಲಿ ನಿರ್ಮಿಸಲಾಗಿದ್ದ ಗಣೇಶ ಚಪ್ಪರ ಎಲೆಕ್ಟ್ರಾಕ್ ಶಾರ್ಟ್ ಸರ್ಕೂಟ್ ಕಾರಣದಿಂದಾಗಿ ಸಂಪೂರ್ಣವಾಗಿ ಭಸ್ಮವಾಗಿ ಹೋಯಿತು. ಇದರಿಂದ ಸುಮಾರು 58,000 ರೂಪಾಯಿ

ನಷ್ಟವಾಗಿದೆಯೆಂದು ವರದಿಯಾಗಿದೆ. 10,000 ರೂಪಾಯಿಯನ್ನು ಪರಿಹಾರವಾಗಿ ಕೊಡಲಾಗಿದೆ. ಚನ್ನಪಟ್ಟಣ ಟೌನ್ ಪೋಲೀಸ್ ಸ್ಟೇಷನ್‌ನಲ್ಲಿ ಈ ಪ್ರಕರಣದ ಬಗ್ಗೆ ಕ್ರೈಮ್‌ನಂ. 186-91 ಒಂದನ್ನು ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಯಾವ ಅಹಿತಕರ ಘಟನೆಯೂ ನಡೆದಿಲ್ಲ.

ಯಡ್ರಾಮಿ : ದಿನಾಂಕ 22-9-91 ರಂದು ಗುಲಬರ್ಗಾ ಜಿಲ್ಲೆಯ ಯಡ್ರಾಮಿ ಗ್ರಾಮದಲ್ಲಿ ಗಣೇಶ ವಿಸರ್ಜನೆಯ ಮೆರವಣಿಗೆಯೊಂದು ನಡೆಯುತ್ತಿದ್ದು, ಬಸ್‌ಸ್ಟಾಂಡ್ ಬಳಿ ಬಂದಾಗ ಕೆಲವು ದುಷ್ಕರ್ಮಿಗಳು ಕಲ್ಲು ತೂರಿದರೆಂದೂ, ಈ ಕಲ್ಲುಗಳ ಮಾರಾಟ ವಡ್ಡರ ಗಲ್ಲಿಯ ಕಡೆಯಿಂದ ಬಂದಿದ್ದರಿಂದ ಮೆರವಣಿಗಾರರು ವಡ್ಡರ ಗಲ್ಲಿಯಲ್ಲಿದ್ದ ಕುಸ್ತಿ ಗಂಗಣ್ಣ ಎಂಬುವರ ಮನೆ ಕಡೆಗೆ ನುಗ್ಗಿ ಅವರು ಮನೆಗೆ ಜಖಂ ಮಾಡಿದರು. ಈ ಕಲ್ಲು ತೂರಾಟದಲ್ಲಿ ಕುಸ್ತಿ ಗಂಗಣ್ಣ ಮತ್ತು ಏಳು ಜನಕ್ಕೆ ಗಾಯಗಳಾದವು. ಮೆರವಣಿಗೆದಾರರಲ್ಲಿ ಕೆಲವರು ಇವರ ಮನೆಯ ಮುಂದೆ ಇದ್ದ ಎರಡು ಟ್ರಾಕ್ಟರ್‌ಗಳು, ಎರಡು ಮೋಟಾರ್ ಸೈಕಲ್‌ಗಳಿಗೆ ಬೆಂಕಿ ಹಚ್ಚಿದರು. ಸ್ಥಳದಲ್ಲೇ ಇದ್ದ ಪೋಸರು ಗುಂಪನ್ನುಶಾಂತಗೊಳಿಸಲು ಮತ್ತು ಚದುರಿಸಲು ಮಾಡಿದ ಪ್ರಯತ್ನ ವಿಫಲವಾದದ್ದರಿಂದ ಲಾಠಿ ಚಾರ್ಜ್ ಮಾಡಿದರು. ಇದರಿಂದಲೂ ಗುಂಪು ಚದುರದೆ ದುಷ್ಕೃತ್ಯಗಳನ್ನು ಮುಂದುವರೆಸಿದಾಗ ಗಾಳಿಯಲ್ಲಿ ಒಂದು ಸುತ್ತು ಗುಂಡು ಹಾರಿಸಿದರು. ಆಮೇಲೆ ಪರಿಸ್ಥಿತಿಯನ್ನು ಹತೋಟಿಗೆ ತರಲಾಯಿತು. ಸ್ಥಳೀಯ ಡಿ.ಎಸ್.ಪಿ. ಮತ್ತು ಸಬ್ ಡಿವಿಷನಲ್ ಮ್ಯಾಜಿಸ್ಟ್ರೇಟ್ ಅವರು ಈ ಗ್ರಾಮಕ್ಕೆ ಭಾವಿಸಿ ಹೆಚ್ಚಿನ ಸಿಬ್ಬಂದಿಯನ್ನು ತೆಗೆದುಕೊಂಡು ಹೋಗಿ ಸುವ್ಯವಸ್ಥೆ ಸ್ಥಾಪಿತವಾಗುವಂತೆ ಸ್ವಂತಃ ನೋಡಿಕೊಂಡರು.

ಈ ಘರ್ಷಣೆಯಲ್ಲಿ ನಾಲ್ಕು ಜನ ಪೋಲೀಸರಿಗೂ, ಏಳು ಜನ ಇತರರಿಗೂ ಗಾಯಗಳಾಗಿವೆ. ಯಡ್ರಾಮಿ ಪೋಲೀಸ್ ಠಾಣೆಯಲ್ಲಿ ಕೇಸೊಂದನ್ನು ದಾಖಲ್ಮಾಡಿಕೊಂಡು 32ಜನ ಅಪರಾಧಿಗಳನ್ನು ಬಂಧಿಸಲಾಗಿದೆ. ಗುಲಬರ್ಗಾ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೋಲಿಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ಕೊಟ್ಟು ಅವಶ್ಯಕ ಕ್ರಮಗಳನ್ನು ಕೈಗೊಂಡಿದ್ದಾರೆ ಮತ್ತು ಈಗ ಪರಿಸ್ಥಿತಿ ಸಂಪೂರ್ಣ ಹತೋಟಿಯಲ್ಲಿದ್ದು ಗ್ರಾಮ ಶಾಂತಿಯುತವಾಗಿದೆ.

ಹುಬ್ಬಳ್ಳಿ : ಹುಬ್ಬಳ್ಳಿ ಪಟ್ಟಣದಲ್ಲಿ ಗಣೇಶ ವಿಗ್ರಹಗಳ ವಿಸರ್ಜನೆ ಮತ್ತು ಮುಸ್ಲಿಂ ಬಾಂಧವರ ಈದ್‌ಮಿಲಾದ್ ಮೆರವಣಿಗೆ ಎರಡೂ ಒಂದೇ ದಿವಸ ಬರುವುದನ್ನು ಮನಗಂಡು, ಮುಂಜಾಗುರೂಕತೆಯಿಂದ ಪೋಲಿಸ್ ಕಮಿಷನರ್ ರವರು ಹುಬ್ಬಳ್ಳಿ - ಧಾರವಾಡ ನಗರದಲ್ಲಿ ಶಾಂತಿ ಸಭೆಗಳನ್ನು ನಡೆಸಿ, ಗಣೇಶೋತ್ಸವ ಹಾಗೂ ಈದ್‌ಮಿಲಾದ್‌ಗಳ ಮೆರವಣಿಗೆಗಳನ್ನು ಶಾಂತ ರೀತಿಯಿಂದ, ಸೌಹಾರ್ದತೆಯಿಂದ ಆಚರಿಸಲು ಮನವಿ ಮಾಡಿಕೊಂಡಿದ್ದರು. ಮುಸ್ಲಿಂ ಮುಖಂಡರು ಮತ್ತು ಸ್ಥಳೀಯ ಶಾಸಕರಾದ ಶ್ರೀ ಎ.ಎಂ. ಹಿಂಡಸಗೇರಿಯವರು ಮುತುವರ್ಜಿಯವರ ಜೊತೆಗೆ ಚರ್ಚಿಸಿ, ಈದ್ ಮೆರವಣಿಗೆಯ ಮಾರ್ಗವನ್ನು ಗೊತ್ತುಪಡಿಸಿ, ಈ ಮಾರ್ಗದಲ್ಲಿ ಮೆರವಣಿಗೆ ತೆಗೆದುಕೊಂಡು ಹೋಗಲು ಅನುಮತಿ ಬೇಡಿ ದಿನಾಂಕ 15-9-91 ರಂದು ಪತ್ರವೊಂದನ್ನು ಬರೆದರು. ಇದರಂತೆ, ಪೋಲೀಸರು ಈ ಮಾರ್ಗದಲ್ಲಿ ಮೆರವಣಿಗೆಯನ್ನು ತೆಗೆದುಕೊಂಡು ಹೋಗಲು ಅನುಮತಿಯನ್ನೂ ನೀಡಿದರು. ದಿನಾಂಕ 7-9-91 ರಂದು ಸ್ಥಳೀಯ ಮೂರುಸಾವಿರ ಮಠದ ಸ್ವಾಮಿಜಿಯವರ ಸಾನ್ನಿಧ್ಯದಲ್ಲಿ ಸೇರಿದ್ದ ಹಿಂದೂ ಮುಸ್ಲಿಂ ಮುಖಂಡರುಗಳು ಶಾಂತಿ ಭಂಗಕ್ಕೆ ಎಡೆಗೊಡದಂತೆ ಈ ಮೊದಲೇ ನಿರ್ಧರಿಸಲಾಗಿದ್ದ ಮಾರ್ಗದಲ್ಲಿಯೇ

ಮೆರವಣಿಗೆಯನ್ನು ತೆಗೆದುಕೊಂಡು ಹೋಗಿ ಶಾಂತಿ ಕಾಪಾಡಿಕೊಂಡು ಹೋಗುವುದಾಗಿ ಎರಡೂ ಗುಂಪಿನ ಮುಖಂಡರು ಭರವಸೆ ನೀಡಿದರು. ದಿನಾಂಕ 11 ರಿಂದ 22 ರವರೆಗೆ ಗಣೇಶೋತ್ಸವದ ಅಂಗವಾಗಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹಿಂದೂ ಮುಸ್ಲಿಂ ಜನಾಂಗದವರಿಬ್ಬರೂ ಬೆರೆತು ಶಾಂತಿಯಿಂದ ಕಾರ್ಯಕ್ರಮಗಳನ್ನು ನಡೆಸಿದರು. ಪೋಲೀಸ್‌ನವರು ಅಗತ್ಯ ಬಂದೋಬಸ್ತ್ ಸಹ ಏರ್ಪಡಿಸಿದ್ದರು. ಮುಂಜಾಗರೂಕತಾ ಕ್ರಮವಾಗಿ ರೌಡಿ ದುಷ್ಕರ್ಮಿಗಳನ್ನು ಮತ್ತು ಮತೀಯ ಪ್ರಚೋದನೆ ಮಾಡುವವರನ್ನು ಸಹ ಬಂಧಿಸಲಾಗಿತ್ತು.

ದಿನಾಂಕ 22-9-91ರಂದು ಮಧ್ಯಾಹ್ನ 2-45ಕ್ಕೆ ಸುಮಾರು ಎಂಟು ಹತ್ತು ಸಾವಿರ ಮೆರವಣಿಗೆಯಲ್ಲಿ ಈದ್‌ಮೆರವಣಿಗೆ ಪ್ರಾರಂಭಿಸಿದರು. ಈ ಮೆರವಣಿಗೆ ಮುಂಚೆಯೇ ನಿಗದಿಪಡಿಸಿದ್ದ ಮಾರ್ಗದಲ್ಲಿ ಹಾದು ಗೈಬುಸಾಬ್ ದರ್ಗಾದ ಕ್ರಾಸ್‌ಅನ್ನು ದಾಟಿ ಮುಂದೆ ಬಂದಾಗ, ಮೆರವಣಿಗೆಯ ಒಂದು ಗುಂಪು ಸುಮಾರು 3,000 ಜನ, ಮೊದಲೇ ನಿಗದಿಪಡಿಸಿದ ಮಾರ್ಗವಾದ ಮಂಗಳವಾರ ಪೇಟೆಯ ಕಡೆಗೆ ಹೋಗದೆ ಗಣೇಶ ಪೆಂಡಾಲ್ ಇರುವ ದುರ್ಗದ ಬೈಲು ಕಡೆಗೆ ಹೋಗಲು ಹಠ ಹಿಡಿದರು. ಗಣೇಶ ಪೆಂಡಾಲ್ ಕಡೆ ಇದ್ದ ಮಾರ್ಗ ಇಕ್ಕಟ್ಟಾಗಿತ್ತು. ಇವರಿಗೆ, ಮೊದಲೇ ಪರವಾನಗಿ ಕೊಟ್ಟಿದ್ದ ಮಾರ್ಗದಲ್ಲೇ ಮೆರವಣಿಗೆ ಮುಂದುವರೆಸಿಕೊಂಡು ಹೋಗಬೇಕೆಂದು ಲೌಡ್‌ಸ್ಪೀಕರ್ ಮುಖಾಂತರ ಮನವಿ ಮಾಡಿ ಕೊಳ್ಳಲಾಯಿತು. ಕೆಲವು ಮುಸ್ಲಿಂ ಮುಖಂಡರು ಮುಂದೆ ಬಂದು, ಮೊದಲೇ ನಿಗದಿಯಾದ ರಸ್ತೆಯಲ್ಲೇ ಹೋಗಬೇಕೆಂದು ಮೆರವಣಿಗೆದಾರರಿಗೆ ಮನವಿಮಾಡಿಕೊಂಡರು. ಆದರೆ, ಇದೆಲ್ಲಾ ವಿಫಲವಾಗಿ, ಮೆರವಣಿಗೆದಾರರು ದುರ್ಗದಬೈಲಿನಿಂದಲೇ ಮೆರವಣಿಗೆ ಹೋಗಲು ದಾರಿ ಕೊಡಬೇಕೆಂದು ಕೂಗಾಡುತ್ತಾ, ಘೋಷಣೆಗಳನ್ನು ಕೂಗುತ್ತಾ ಘರ್ಷಣೆಗೆ ಇಳಿದರು. ಸ್ಥಳೀಯ ಶಾಸಕರಾದ ಶ್ರೀ ಎ.ಎಂ. ಹಿಂಡಸಗೇರಿಯವರೂ ಸಹ ಈ ಗುಂಪಿನವರನ್ನು ಸಮಾಧಾನ ಪಡಿಸಲು ಮಾತನಾಡಲು ಪ್ರಯತ್ನಪಟ್ಟಾಗ ಅವರ ಮನವಿಯನ್ನೂ ಸಹ ತಿರಸ್ಕರಿಸಲಾಯಿತು. ಈ ಗುಂಪು ನೂಕಾಟ, ಕಲ್ಲು ಚಪ್ಪಲಿ ತೂರಾಟ ಪ್ರಾರಂಭಿಸಿ, ಅವರ ಮುಖಂಡರೂ ಸೇರಿದಂತೆ ಪೋಲೀಸರ ಮೇಲೂ ಕಲ್ಲು, ಇಟ್ಟಿಗೆ, ಚಪ್ಪಲಿ ಎಸೆಯುತ್ತಾ, ಪೋಲೀಸರನ್ನು ತಳ್ಳಿಕೊಂಡು ದುರ್ಗದ ಬೈಲಿನ ಕಡೆಗೆ ಹೋಗಲು ಪ್ರಯತ್ನಿಸಿದರು. ಇದನ್ನು ಚದುರಿಸಲು ಪೋಲೀಸರು ಮೊದಲು ಅಶ್ರುವಾಯು ಶೆಲ್‌ಗಳನ್ನು ಸಿಡಿಸಿದರು. ಪರಿಸ್ಥಿತಿ ಉತ್ತಮವಾಗದಿದ್ದರಿಂದ ಮತ್ತು ಹಾನಿ ಹೆಚ್ಚಾಗುತ್ತಿದ್ದುದರಿಂದ ಪೋಲೀಸರು ಲಾಠಿ ಪ್ರಹಾರ ಮಾಡಿದರು. ಈ ಘರ್ಷಣೆಯಲ್ಲಿ ಸರ್ಕಾರಿ ಬಸ್‌ಗಳಿಗೂ ಮತ್ತು ಸಾರ್ವಜನಿಕ ಆಸ್ತಿಪಾಸ್ತಿಗಳಿಗೂ ಹಾನಿಯುಂಟಾಗಿದೆ. ಮುಂಜಾಗರೂಕತಾ ಕ್ರಮವಾಗಿ ಪೋಲೀಸ್ ಕಮಿಷನರ್‌ರವರು ಸಿ.ಆರ್. ಪಿ.ಸಿ. 144ನೇ ಸೆಕ್ಷನ್ ಅನ್ನು ಸಹ 22-9-91 ರಿಂದ ಐದು ದಿನಗಳು ಜಾರಿಯಲ್ಲಿರುವಂತೆ ಜಾರಿಗೊಳಿಸಿದರು. ಕೆಲವು ದುಷ್ಕರ್ಮಿಗಳು ಸ್ಥಳೀಯ ಶಾಸಕ ಶ್ರೀ ಎ.ಎಂ. ಹಿಂಡಸಗೇರಿಯವರ ಮನೆಗೂ ಸಹ ಜಖಂ ಮಾಡಿದ್ದಾರೆ. ಇದಾದ ಮೇಲೆ ಪರಿಸ್ಥಿತಿ ಸಂಪೂರ್ಣ ಹತೋಟಿ ತರಲಾಯಿತು.

ಈ ಘರ್ಷಣೆಗಳಲ್ಲಿ 24ಜನ ಪೋಲೀಸರಿಗೂ ಮತ್ತು 11ಜನ ಸಾರ್ವಜನಿಕರಿಗೂ ಗಾಯಗಳಾಗಿವೆ. ಹುಬ್ಬಳ್ಳಿ ಟೌನ್ ಪೋಲೀಸ್ ಸ್ಟೇಷನ್‌ನಲ್ಲಿ ಕ್ರೈಮ್‌ನಂ. 263, 264 ಮತ್ತು 265 ಎಂದು ದಾಖಲ್ಮಾಡಿಕೊಳ್ಳಲಾಗಿದ್ದು ಪ್ರಕರಣ ತನಿಖೆಯಲ್ಲಿದೆ. ಇದುವರೆಗೆ 30 ಜನರನ್ನು ದಸ್ತಗಿರಿ ಮಾಡಲಾಗಿದೆ. ಆರೋಪಿಗಳನ್ನು ನ್ಯಾಯಾಲಯದ

ಮುಂದೆ ಹಾಜರ್ಪಡಿಸಿಲಾಗಿದೆ. ಕೆಲವರು ಜಮೀನಿನ ಮೇಲೆ ಬಿಡುಗಡೆಯಾಗಿದ್ದು, ಇನ್ನುಳಿದವರು ನ್ಯಾಯಾಂಗ ಬಂಧನದಲ್ಲಿದ್ದಾರೆ. ಈ ಗಲಭೆಯಲ್ಲಿ ಕಲ್ಲು ತೂರಾಟದಿಂದ ಕೆ.ಎಸ್. ಆರ್.ಟಿ.ಸಿ ಬಸ್ ಒಂದಕ್ಕೆ ಜಕಾಂ ಆಗಿದ್ದು ಚಾಲಕನಿಗೆ ಗಾಯಗಳಾಗಿವೆ. ಈ ಬಗ್ಗೆ ಸಹ ದೂರನ್ನು ದಾಖಲ್ಮಾಡಿಕೊಳ್ಳಲಾಗಿದೆ.

ಮೊದಲೇ ನಿರ್ಧರಿಸಿದ್ದ ರಸ್ತೆಗಳ ಮುಖಾಂತರ ಗಣೇಶ ವಿಗ್ರಹಗಳನ್ನು ಪೋಲೀಸ್ ಬಿಗಿ ಬಂದೋಬಸ್ತ್‌ನೊಡನೆ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಿ ಈ ಮೊದಲೇ ಗೊತ್ತುಪಡಿಸಿದ್ದ ಕಾರ್ಯಕ್ರಮದ ಪ್ರಕಾರ ವಿಸರ್ಜನೆ ಮಾಡಲಾಯಿತು.

ಕೆಲವು ಕಿಡಿಗೇಡಿಗಳು ಹಿರೇಪೇಟೆಯಲ್ಲಿರುವ ಒಂದು ಬೀಡಿ ಅಂಗಡಿಗೆ ಬೆಂಕಿ ಹಚ್ಚಲು ಪ್ರಯತ್ನಿಸಿದ್ದು ಅಂಗಡಿಯಲ್ಲಿದ್ದ ಸುಮಾರು 500 ರೂಪಾಯಿ ಬೆಲೆಬಾಳುವ ಪದಾರ್ಥಗಳು ಲಕ್ಷಾನಾಗಿವೆ.

ಮಾನ್ಯ ಅಧ್ಯಕ್ಷರೇ, ಈ ಘಟನೆಯ ಸಂಬಂಧದಲ್ಲಿ ಎಂಟು ಪ್ರಕರಣಗಳು ದಾಖಲಾಗಿದ್ದು, 13 ಜನ ಸಾರ್ವಜನಿಕರಿಗೂ, ಇಬ್ಬರು ಕೆ.ಎಸ್.ಆರ್.ಟಿ.ಸಿ. ಡ್ರೈವರ್ ಗಳೂ, ಎ.ಸಿ.ಪಿ ಯವರೂ ಸೇರಿದಂತೆ 29 ಜನ ಪೋಲೀಸ್ ಸಿಬ್ಬಂದಿಯವರು ಗಾಯಗೊಂಡಿದ್ದು, ಕೆ.ಎಸ್.ಆರ್.ಟಿ.ಸಿ. ಬಸ್‌ಗಳೂ ಸೇರಿದಂತೆ 33,500 ರೂಪಾಯಿಗಳ ಆಸ್ತಿ ನಷ್ಟವಾಗಿದೆ. 35 ಜನರನ್ನು ಈವರೆಗೆ ಅರೆಸ್ಟ್ ಮಾಡಲಾಗಿದ್ದು 10 ಜನರು ಜಮಿನಿನಾ ಮೇಲೆ ಬಿಡುಗಡೆಯಾಗಿದ್ದಾರೆ. ಉಳಿದವರು ಜುಡಿಷಿಯಲ್ ಕಸ್ಟಡಿಯಲ್ಲಿದ್ದಾರೆ. ದಿನಾಂಕ 27-9-91 ರ ವರೆಗೆ ಸೆಕ್ಷನ್ 144ರ ಪ್ರಕಾರ ನಿಷೇಧಾಜ್ಞೆ ಜಾರಿಯಲ್ಲಿದೆ. ಪೋಲೀಸ್ ಬಂದೋಬಸ್ ವ್ಯವಸ್ಥೆ ಮುಂದುವರೆದಿದೆ. ನಗರದಲ್ಲಿ ಶಾಂತಿ ನೆಲೆಸಿದೆ. ಯಾವುದೇ ಅಹಿತಕರ ಘಟನೆಗಳೂ ನಡೆದಿಲ್ಲ.

ಬೆಳಗಾಂ : ಬೆಳಗಾಂ ನಗರದಲ್ಲೂ ಸಹ, ಮಾನ್ಯ ಅಧ್ಯಕ್ಷರೇ, ಗಣೇಶ ವಿಗ್ರಹಗಳ ವಿಸರ್ಜನೆ ಮತ್ತು ಈದ್ ಮಿಲಾದ್ ಮೆರವಣಿಗೆ ಒಂದೇ ದಿನ ನಡೆಯಿತು. ಅಂದರೆ 22-9-91ರಂದು.ಈ ಉತ್ಸವಗಳ ಸಂದರ್ಭದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಿಕೊಂಡು ಬರಲು ಮುಂಜಾಗರೂಕತೆಯ ಕ್ರಮವಾಗಿ ಶಾಂತಿ ಸಮಿತಿ ಸಭೆಗಳನ್ನು ದಿನಾಂಕ 2-9-91ಮತ್ತು 17-9-91 ರಂದು ನಡೆಸಿ, ಹಿಂದೂ ಮುಸ್ಲಿಂ ಮುಖಂಡರುಗಳ ಸಹಕಾರ ಕೇಳಿ ಕೊಳ್ಳಲಾಯಿತು. ಸಭೆಯಲ್ಲಿ ಭಾಗವಹಿಸಿದ ಮುಖಂಡರೆಲ್ಲಾ ಶಾಂತಿ ಕದಡದಂತೆ ನೋಡಿಕೊಳ್ಳಲು ಭರವಸೆ ನೀಡಿದರು. ಅಗತ್ಯವಾದ ಪೋಲಿಸ್ ಬಂದೋಬಸ್ತ್ ಸಹ ಏರ್ಪಡಿಸಲಾಗಿತ್ತು. ಸೂಕ್ಷ್ಮ ಸ್ಥಳಗಳಲ್ಲಿ ಬಿಗಿ ಬಂದೋಬಸ್ತ್ ಇಡಲಾಗಿತ್ತು. ಮುಂಜಾಗರೂಕತಾ ಕ್ರಮವಾಗಿ ದಿನಾಂಕ 21-9-91ರಂದು 37 ಜನ ಅನಪೇಕ್ಷಿತ ವ್ಯಕ್ತಿಗಳನ್ನು ಪೋಲಿಸ್ ಸುಪರ್ದಿಗೂ ಸಹ ತೆಗೆದುಕೊಳ್ಳಲಾಗಿತ್ತು. ಪೋಲೀಸರು ಸಿ.ಆರ್.ಪಿ.ಎಫ್ ಕೆ.ಎಸ್.ಆರ್.ಪಿ. ಡಿ.ಎ.ಆರ್.ಹಾಗೂ ಹೋಮಗಾರ್ಡ್ಸ್ ಸಿಬ್ಬಂದಿಯವರು ಗಸ್ತು ಏರ್ಪಡಿಸಲಾಗಿತ್ತು.

22-9-91ಮಧ್ಯಾಹ್ನ 3-00ಗಂಟೆಗೆ ಈದ್‌ಮಿಲಾದ್ ಮೆರವಣಿಗೆ ಪ್ರಾರಂಭವಾಗಿ6-00 ಗಂಟೆಯ ವೇಳೆಗೆ ಶಾಂತಿಯುತವಾಗಿ ಮುಕ್ತಾಯವಾಯಿತು. ಈದ್ ಮಿಲಾದ್ ಕಾರ್ಯಕ್ರಮ ಆಸದ್ ಖಾನ್ ದರ್ಗಾ ಬಳಿ ಆಚರಿಸಲ್ಪಟ್ಟು ಸುಮಾರು 7-30 ರ ಹೊತ್ತಿಗೆ ಮುಕ್ತಾಯಗೊಂಡಿತು. ಗಣೇಶ ಪ್ರತಿಮೆಯ ಮೆರವಣಿಗೆ 6-10 ಕ್ಕೆ ಪ್ರಾರಂಭವಾಯಿತು. ಸುಮಾರು 100 ವಿಗ್ರಹಗಳು ಮೆರವಣಿಗೆಯಲ್ಲಿದ್ದವು. ಸುಮಾರು 8-30ರ ಹೊತ್ತಿಗೆ ಚಾವಟ್ ಗಲ್ಲಿಯ ಸಮಿಪ ಸುಮಾರು 100-150 ಒಂದು

ಗುಂಪಿನ ಜನರು ಆ ಮಾರ್ಗದಲ್ಲಿ ಹೊರಟ್ಟಿದ್ದ ಐದು ಗಣೇಶ ವಿಗ್ರಹಗಳ ಮೆರವಣಿಗೆಯನ್ನು ತಡೆದರು. ಈ ಮೆರವಣಿಗೆ ಚಾವ್ ಗಲ್ಲಿ, ದರ್ಬಾರ್‌ಗಳಲ್ಲಿ, ಕಡೇ ಬಜಾರ್ ಮುಖಾಂತರ ಹೊರಟು ಪ್ರಮುಖ ಮೆರವಣಿಗೆಯನ್ನು ಸೇರಿ ಕೊಳ್ಳುವ ಉದ್ದೇಶ ಇತ್ತು. ಈ ಮೆರವಣಿಗೆಗೆ ತಡೆ ಒಡ್ಡಿದಾಗ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಅವರು ಮತ್ತು ಜಿಲ್ಲಾ ಪೋಲೀಸರ್ ಅಧಿಕಾರಿಗಳು ತಡೆ ಒಡ್ಡಿದ ಗುಂಪಿನವರನ್ನು ಸಮಾಧನ ಪಡಿಸಲು ಪ್ರಯತ್ನಿಸಿದರು. ಆದರೆ, ಈ ಗುಂಪಿನವರು ಒಪ್ಪಲು ನಿರಾಕರಿಸಿದರು. ಹಾಗೂ ತಾವು ಈಗಾಗಲೇ ಈ ಸ್ಥಳದಲ್ಲಿ ನಿರ್ಮಿಸಿದ್ದ ಬಣ್ಣ ಬಣ್ಣದ ದೀಪಾಲಂಕಾರ, ಈ ಉದ್ದೇಶಿತ ಮೆರವಣಿಗೆಯನ್ನು ಹೋಗಲು ಅವಕಾಶ ಕೊಟ್ಟರೆ ಈ ದೀಪಾಲಂಕಾರಕ್ಕೆ ಹಾನಿಯಾಗುವುದೆಂದು ಪ್ರತಿಭಟಿಸಿದರು. ಸ್ಥಳದಲ್ಲೇ ಹಾಜರಿದ್ದ ಈ ಗುಂಪಿನ ಮುಖಂಡರು ಮತ್ತು ಸ್ಥಳೀಯ ಪುರಸಭಾ ಕಾರ್ಪೊರೇಟರ್‌ಗಳು ಈ ಗುಂಪಿನವರನ್ನು ಒಪ್ಪಿಸಲು ಪ್ರಯತ್ನಿಸಿದರು ಮತ್ತು ತಾವು ಈ ಬಣ್ಣ ಬಣ್ಣದ ದೀಪಾಲಂಕಾರಕ್ಕೆ ಯಾವ ತೊಂದರೆಯೂ ಆಗದಂತೆ ನೋಡಿಕೊಳ್ಳುವುದಾಗಿಯೂ ಭರವಸೆ ನೀಡಿದರು. ಎಷ್ಟೇ ಪ್ರಯತ್ನ ಪಟ್ಟರೂ ಇನ್ನೊಂದು ಗುಂಪಿನವರು ಈ ಬೇಡಿಕೆಗಳನ್ನು ನಿರಾಕರಿಸಿದರು ಹಾಗೂ ಇದ್ದಕ್ಕಿದ್ದಂತೆ ಕಲ್ಲು ತೂರಾಟ ಪ್ರಾರಂಭಿಸಿದರು. ಗುಂಪನ್ನು ಚದುರಿಸಲು ಪೋಲೀಸರು ಟಿಟರ್ ಗ್ಯಾಸ್ ಮತ್ತು ಲಾಠಿ ಚಾರ್ಜ್ ಮಾಡಿದರು. ಹಾಗೂ ಈ ಐದು ಗಣೇಶ ವಿಗ್ರಹಗಳ ಮೆರವಣಿಗೆಯನ್ನು ಖಡೇ ಬಜಾರ್ ಪ್ರಮುಖ ಮೆರವಣಿಗೆಯೊಂದಿಗೆ ಸೇರಿಕೊಳ್ಳಲು ಅವಕಾಶ ಮಾಡಿಕೊಟ್ಟರು. ಈ ಸಂದರ್ಭದಲ್ಲಿ ಕೆಲವು ಮುಸ್ಲಿಂ ಸ್ವಯಂಸೇವಕರೂ ಸಹ ಸಹಾಯ ಮಾಡಿದರು. ದಿನಾಂಕ 23-9-91 ಪ್ರಾತಃಕಾಲ ಈ ಗಣೇಶ ವಿಸರ್ಜನೆ ಕಾರ್ಯಕ್ರಮದ ಮೆರವಣಿಗೆ ಶಾಂತಿಯುತವಾಗಿ ಮುಕ್ತಾಯಗೊಂಡಿತು.

ಅಜಾದ್‌ದಲ್ಲಿ, ದರ್ಬಾರ್‌ಗಳಲ್ಲಿ, ಚಾವಟ್‌ಗಲ್ಲಿ, ಮುಜಾವರ್‌ಗಲ್ಲಿ ಮತ್ತು ಪೆಂಪಲಗಟ್ಟಿ ಭಾಗಗಳಿಂದ ಕಲ್ಲು ತೂರಾಟದ ಮತ್ತು ಅಂಗಡಿಗಳ ಲೂಟಿ ಪ್ರಕರಣಗಳು ವರದಿಯಾಗಿವೆ.

ಈ ಘಟನೆಗಳಲ್ಲಿ ಒಟ್ಟು 229 ಜನರನ್ನೂ, ಕಲ್ಲು ತೂರಾಟ ಮತ್ತು ಲೂಟಿ ಮತ್ತು ಆರ್ಸನ್ ಅಪರಾಧಿಗಳಿಗಾಗಾ ಬಂಧಿಸಲಾಗಿದೆ. ಈ ಘಟನೆಗಳಲ್ಲಿ ವಿವಿಧ ದರ್ಜಿಯ 79 ಪೋಲಿಸ್ ಸಿಬ್ಬಂದಿಯವರು 15 ಜನ ಹೋಮ್‌ಗಾರ್ಡ್‌ಗಳೂ ಮತ್ತು 4 ಜನ ಸಾರ್ವಜನಿಕರು ಗಾಯಗೊಂಡಿದ್ದಾರೆ. 25 ವರ್ಷ ವಯಸ್ಸಿನ ಒಬ್ಬ ವ್ಯಕ್ತಿ ಪ್ರಜ್ಞಾಹೀನನಾಗಿ ರಸ್ತೆಯ ಬಳಿ ಬಿದ್ದಿದ್ದನ್ನು ಕಂಡು ಬೆಳಗಾಂ ಸಿವಿಲ್ ಆಸ್ಪತ್ರೆಗೆ ಸಾಗಿಸಲಾಯಿತು. ಅಲ್ಲಿ ಆತ ಮೃತಪಟ್ಟಿದ್ದಾನೆಂದು ತಿಳಿಸಲಾಯಿತು. ಈತನನ್ನು ಲಕ್ಷಣ್ ವಿಠಲ್ ಮೋರ್ಕರ್ ಎಂದು ಗುರುತಿಸಲಾಗಿದ್ದು, ಈತ ಹಿಂದವಾಡಿ ಭಾಗದ ಆದರ್ಶ ನಗರಕ್ಕೆ ಸೇರಿದನೆಂದು ಗೊತ್ತಾಗಿದೆ. ಈ ಶವವನ್ನು ಮೃತರ ಸಂಬಂಧಿಗಳಿಗೆ ಕೊಡಲಾಗಿದ್ದು, 24-9-91ರ ಸಂಜೆ 5-30ಕ್ಕೆ ಶವ ಸಂಸ್ಕಾರ ಸಹ ನಡೆದಿದೆ. ಮೃತರ ಕುಟುಂಬಕ್ಕೆ ಈ ಸಂಬಂಧದ ನಿಯಮಗಳ ಅನುಸಾರ 50,000ರೂಪಾಯಿಗಳ ಪರಿಹಾರ ಧನವನ್ನು ನಿನ್ನೆ ದಿನ ಜಿಲ್ಲಾಧಿಕಾರಿಗಳು ವಿತರಿಸಿದ್ದಾರೆಂದು ನನಗೆ ವರದಿ ಬಂದಿದೆ.

ಈ ಘಟನೆಗಳಲ್ಲಿ ಇದುವರೆಗಿನ ಅಂದಾಜಿನಂತೆ ಹದಿನಾಲ್ಕು ಲಕ್ಷ ಹದಿನೆಂಟು ಸಾವಿರದ ಎರಡು ನೂರು ಮುವ್ವತ್ನಾಲ್ಕು ರೂಪಾಯಿ ಆಸ್ತಿ ನಷ್ಟವಾಗಿದೆಯೆಂದು ವರದಿಯಾಗಿದೆ. ಒಟ್ಟು 229 ಜನರನ್ನು ಇದುವರೆಗೆ ಅರೆಸ್ಟ್ ಮಾಡಲಾಗಿದೆ. 33

ಬೇರೆ ಬೇರೆ ಅಪರಾಧಗಳ ಮೇಲೆ ಕೇಸ್‌ಗಳನ್ನು ರಿಜಿಸ್ಟರ್ ಮಾಡಿಕೊಂಡು ತನಿಖೆ ಮುಂದುವರೆಯುತ್ತಿದೆ. ಜಿಲ್ಲಾ ರೆವೆನ್ಯೂ ಅಧಿಕಾರಿಗಳು ಹಾನಿಗೊಳಗಾದ ಆಸ್ತಿಗಳನ್ನು ಖುದ್ದು ಪರಿಶೀಲಿಸಿ ನಷ್ಟದ ನಿಖರ ಅಂದಾಜನ್ನು ತಯಾರಿಸುತ್ತಿದ್ದಾರೆ. ಈ ಸಂಬಂಧದ ನಿಯಮಾವಳಿಗಳನ್ನು ಅನುಸರಿಸಿ ಪರಿಹಾರ ಧನವನ್ನು ಒದಗಿಸಲು ಜಿಲ್ಲಾಧಿಕಾರಿ ಮತ್ತು ವಿಭಾಗಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಮುಂಜಾಗರೂಕತಾ ಕ್ರಮವಾಗಿ ದಿನಾಂಕ 27-9-91ರ ಪ್ರಾತಃಕಾಲದವರೆಗೆ 144ನೇ ಸೆಕ್ಷನ್ ಪ್ರಕಾರ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಮಾನ್ಯ ಅಧ್ಯಕ್ಷರೇ, ನನ್ನ ಸಚಿವ ಸಹೋದ್ಯೋಗಿ ಜಿಲ್ಲಾ ಉಸ್ತುವಾರಿ ಮಂತ್ರಿಗಳೂ ಆದ ಶ್ರೀ ಮಲ್ಲಾರಿಗೌಡ ಪಾಟೀಲರು ಬೆಳಗಾಂ ನಗರಕ್ಕೆ ಭೇಟಿ ಕೊಟ್ಟಿದ್ದು, ಸ್ಥಳೀಯ ಮಾನ್ಯ ಶಾಸಕರೂ, ಮೇಯರ್ ಮತ್ತು ಉಪಮೇಯರ್ ರವರೂ, ಎರಡೂ ಕೋಮಿನ ಮುಖಂಡರೂ ಮತ್ತು ಸ್ಥಳೀಯ ಪ್ರಮುಖರೂ, ವಿಭಾಗಾಧಿಕಾರಿಗಳೂ, ಜಿಲ್ಲಾ ಮ್ಯಾಜಿಸ್ಟ್ರೇಟರೂ ಮತ್ತು ಜಿಲ್ಲಾ ಪೋಲೀಸ್‌ಅಧಿಕಾರಿಗಳು ಇವರೆಲ್ಲರನ್ನೂ ಕೂಡಿಕೊಂಡು ಗಲಭೆಗೊಳಗಾದ ಸ್ಥಳಗಳಿಗೆ ಭೇಟಿ ಕೊಟ್ಟು ಪರಿಸ್ಥಿತಿಯನ್ನು ಅಧ್ಯಯನ ಮಾಡಿದ್ದಾರೆ. ನೊಂದವರನ್ನು ಭೇಟಿ ಮಾಡಿದ್ದಾರೆ. ಹಾಗೂ ಈ ಇಡೀ ಪ್ರಕರಣದ ಬಗ್ಗೆ ತೀವ್ರವಾಗಿ ಒಂದು ಸಮಗ್ರ ತನಿಖೆ ನಡೆಸಿ, ಸಂಬಂಧಪಟ್ಟ ಎಲ್ಲರನ್ನೂ ಸಂದರ್ಶಿಸಿ ಒಂದು ಸವಿವರವಾದ ವರದಿಯನ್ನು ಒಂದು ವಾರದೊಳಗೆ ಸರ್ಕಾರಕ್ಕೆ ಸಲ್ಲಿಸಬೇಕೆಂದು ಆದೇಶ ನೀಡಿದ್ದಾರೆ. ಅಗತ್ಯವಾದ ಹೆಚ್ಚುವರಿ ಪೋಲಿಸ್ ಸಿಬ್ಬಂದಿಯನ್ನು ಪಕ್ಕದ ಜಿಲ್ಲೆಗಳಿಂದ ತರಿಸಿಕೊಂಡು ಬೆಳಗಾಂ ನಗರದಲ್ಲಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ. ಪರಿಸ್ಥಿತಿ ಈಗ ಸಂಪೂರ್ಣಹತೋಟಿಯಲ್ಲಿದ್ದು ನಗರ ಶಾಂತವಾಗಿದೆ.

ಸನ್ಮಾನ್ಯ ಅಧ್ಯಕ್ಷರೇ ಇಡೀ ರಾಜ್ಯದಲ್ಲಿ ಪರಂಪರಾಗತವಾಗಿ ನಡೆದುಕೊಂಡು ಬರುವ ಗಣೇಶೋತ್ಸವ ಮತ್ತು ಈದ್ ಮಿಲಾದ್ ಹಬ್ಬವನ್ನು ಶಾಂತಿ, ಸೌಹಾರ್ದತೆ ಮತ್ತು ಉಲ್ಲಾಸದಿಂದ ನಡೆಸಿಕೊಂಡು ಬರುತ್ತಿರುವಾಗ ದುರದೃಷ್ಟವಶಾತ್, ಕೆಲವು ದುಷ್ಕರ್ಮಿಗಳ ಕಿಡಿಗೇಡಿತನದಿಂದ ಈ ನಾಲ್ಕು ಸ್ಥಳಗಳಲ್ಲಿ ಅಹಿತಕರ ಘಟನೆ ನೆಡಿದದ್ದು ವಿಷಾದನೀಯ .ಈ ಸಂದರ್ಭದಲ್ಲಿ ಎರಡೂ ಕೋಮಿನ ಮುಖಂಡರುಗಳು ಈ ಘಟನೆ ನಡೆಯಲು ಅವಕಾಶ ಕೊಡದಂತೆ ಮನವಿ ಮಾಡಿಕೊಂಡಿದ್ದರೂ, ಈ ದುಷ್ಕರ್ಮಿಗಳ ಹಠಮಾರಿತನದಿಂದ ಸಫಲವಾಗದಿದ್ದದ್ದು ಗಮನಾರ್ಹ. ಈ ನಾಲ್ಕು ಸ್ಥಳಗಳನ್ನು ಹೊರತುಪಡಿಸಿ ಇಡೀ ರಾಜ್ಯದ ಜನತೆ ಈ ಹಬ್ಬಗಳನ್ನು ಸೌಹರ್ದತೆಯಿಂದ ಆಚರಿಸಿ, ರಾಜ್ಯದಲ್ಲಿ ಕೋಮು ಸೌಹರ್ದತೆಯನ್ನು ಕಾಪಾಡಿಕೊಂಡು ಬಂದದ್ದಕ್ಕಾಗಿ ತಮ್ಮ ಮೂಲಕ ರಾಜ್ಯದ ಜನರನ್ನು ಅಭಿನಂದಿಸುತ್ತೇನೆ.

ಮಾನ್ಯ ಉಪಾಧ್ಯಕ್ಷೆಯರೇ, ವಿರೋಧಪಕ್ಷದ ನಾಯಕರಾದ ಶ್ರೀ ಡಿ.ಬಿ. ಚಂದ್ರೇಗೌಡರು ಉಪನಾಯಕರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು, ಶ್ರೀ ವಾಟಾಳ್ ನಾಗರಾಜ್‌ರವರು, ಶ್ರೀ ಯಡಿಯೂರಪ್ಪನವರು, ಶ್ರೀ ದೇಶಪಾಂಡೆಯವರು ಮತ್ತು ವಿಶೇಷವಾಗಿ ಪ್ರೊ| ನಂಜುಂಡಸ್ವಾಮಿಯವರು ಈ ಒಂದು ಘಟನೆಗಳ ಬಗ್ಗೆ ಬಹಳ ತೀವ್ರತರವಾದ ಕಳಕಳವನ್ನು ಕೂಡ ವ್ಯಕ್ತಪಡಿಸಿದ್ದಾರೆ. ನಾನು ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ನಾಲ್ಕು ಕೋಟಿ ಜನಸಂಖ್ಯೆ ಏನಿದೆ? ಇಂಥ ಒಂದು ಪರಿಸ್ಥಿತಿಯಲ್ಲಿ ಗಣೇಶೋತ್ಸವ ನಡೆದುಕೊಂಡು ಬರತಕ್ಕಂಥ ಸಂದರ್ಭದಲ್ಲಿ ಬಹಳ ಮುಂಜಾಗರೂಕತೆಯಿಂದ, ಬಹಳ ವಿಶೇಷವಾಗಿ ಗಮನಕೊಡಬೇಕೆಂದು ರಾಜ್ಯಮಟ್ಟದ ಉನ್ನತ ಅಧಿಕಾರಿಗಳ ಸಭೆಯನ್ನು ಕೂಡಾ ನಡೆಸಿದ್ದೇನೆ. ಮತ್ತು

ನಮ್ಮ ರಾಜ್ಯದಲ್ಲಿರತಕ್ಕಂಥ ಒಂದು ಸೆನ್ಸಿಟಿವ್ ಏರಿಯಾ ಏನಿದೆ? ಎಲ್ಲಿ ಈ ತರಹದ ದಂಗೆ ನಡೆಯುತ್ತವೆ,ಅದೆಲ್ಲವನ್ನೂ ಕೂಡಾ ನಾವು ಐಡೆಂಟಿಫೈ ಮಾಡಿದ್ದೇವೆ. ಮತ್ತು ಅದಕ್ಕೆ ವಿಶೇಷವಾದ ರೀತಿಯಲ್ಲಿ ಗಮನಕೊಡ ತಕ್ಕಂಥ ರೀತಿಯಲ್ಲಿ, ಗಣೇಶೋತ್ಸವ ಮತ್ತು ಈದ್ ಮಿಲಾದ್ ನಡೆಯತಕ್ಕಂಥ ಸಂದರ್ಭದಲ್ಲಿ ಪೂರ್ತಿ ದಿನ ಆ ಒಂದು ಭಾಗದಲ್ಲಿರತಕ್ಕಂಥ ಡಿಐಜಿಯಾಗಲಿ, ಎಸ್‌ಪಿಯಾಗಲಿ ಅವರನ್ನುನಾನು ಫೋನಿನ ಮುಖಾಂತರ ಸಂಪರ್ಕ ಮಾಡಿಕೊಂಡು ಮಾತನಾಡತಕ್ಕಂಥ ಪ್ರವೃತ್ತಿಯನ್ನು ನಾನು ಬೆಳೆಸಿಕೊಂಡು ಬಂದಿದ್ದೇನೆ. ಏಕೆಂದರೆ, ಕಳೆದ ಅಕ್ಟೋಬರ್ ತಿಂಗಳಲ್ಲಿ ಬೇರೆ ಕಡೆಗೆ ಈ ತರಹದ ಘಟನೆಗಳಾಗಿವೆ. ಕಳೆದ ಚುನಾವಣೆಯಲ್ಲೂ ಕೂಡಾ ಆಗಿದೆ. ಇವೊತ್ತು ದೇಶದ ಮುಂದೆ ಏನು ಕೆಲವು ಪ್ರಕರಣಗಳಿವೆ. ಯಾವ ಪ್ರಕಾರ ಬೇರೆ ಬೇರೆ, ಒಂದು ಉದ್ದೇಶಪೂರ್ವಕವಾಗಿ, ವ್ಯವಸ್ಥಿತವಾಗಿ ಈ ತರಹದಲ್ಲಿ ಮಾಡತಕ್ಕಂಥ ಶಕ್ತಿಗಳೇನಿವೆ, ಆ ಶಕ್ತಿಗಳ ಬಗ್ಗೆ ಗಮನಕೊಡಬೇಕೆಂದು ನಾನು ಅಧಿಕಾರಿಗಳಿಗೆ ತಿಳಿಸಿದ್ದೇನೆ. ಇದು ಮಾನ್ಯ ನಾಗರಾಜ್‌ರವರಿಗೂ ಕೂಡಾ ಗೊತ್ತಿದೆ. ಬಹಳ ದಿವಸಗಳ ನಂತರ ನಾವು ನ್ಯಾಷನಲ್ ಇಂಟಿಗ್ರೇಶನ್ ಎನ್ನತಕ್ಕಂಥ ಒಂದು ಮೀಟಿಂಗ್ ಅನ್ನು ರಾಜ್ಯಮಟ್ಟದಲ್ಲೂ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆಸಿದ್ದೇವೆ. ಇವೊತ್ತು ಪ್ರತಿಯೊಂದು ಜಿಲ್ಲೆಯಲ್ಲೂ ಕೂಡಾ ಶಾಂತಿ, ಸೌಹಾರ್ದಕ್ಕಾಗಿ, ಅಲ್ಲಿರತಕ್ಕಂಥ ಮುಖಂಡರು ಒಂದು ಸಮಿತಿಯನ್ನು ಸಹಾ ಮಾಡಿಕೊಂಡಿದ್ದೇವೆ. ಯಾವುದೇ ಹಬ್ಬ ಅಂದರೆ ಅದು ಮೊಹರಂ ಹಬ್ಬ ಹೋಳಿ ಹಬ್ಬ ಬರತಕ್ಕಂಥ ದಿವಸದಲ್ಲಿ ಜಿಲ್ಲಾಧಿಕಾರಿಗಳ ಸಭೆಯನ್ನು ಕರೆದು ಸಮಾಲೋಚನೆ ಮಾಡಿ, ಎಲ್ಲರೂ ಕೂಡಾ ಸಹಕಾರ ಕೊಡಬೇಕೆಂದು, ಈ ರೀತಿಯಲ್ಲಿ ಮನವಿ ಮಾಡಿಕೊಂಡು ಬರತಕ್ಕಂಥ ಪದ್ಧತಿ ಕೂಡ ಇದೆ. ಆದರೂ ಇವೊತ್ತು ಈ ರೀತಿ ಏಕಾಏಕಿ ಆಗತಕ್ಕಂಥ ರೀತಿಯಲ್ಲಿ ಕೂಡಾ ಯಾವ ಜನಸಂಖ್ಯೆ ಹೆಚ್ಚಿನ ರೀತಿಯಲ್ಲಿ ದಿನೇದಿನೇ ಬೆಳೆಯುತ್ತಿರುವಾಗ ಈ ತರಹ ಘಟನೆಗಳು ನಡೆಯತಕ್ಕಂಥ ರೀತಿಯಲ್ಲಿ ಕೂಡಾ ಒಮ್ಮೊಮ್ಮೆ ನಾವು ಬೇಕಾದಷ್ಟು ಮುಂಜಾಗ್ರತೆ ತೆಗೆದುಕೊಂಡರೂ ಸಹಾ ಅಹಿತಕರ ಘಟನೆಗಳು ಆಗುತ್ತವೆ. ಆದರೂ ಸಹ ಹುಬ್ಬಳ್ಳಿ ಮತ್ತು ಬೆಳಗಾಂನಲ್ಲಿ ಈ ತರಹದ ಒಂದು ಘಟನೆ ನಡೆದ ನಂತರ ನಾವು ಅದನ್ನು ಹತೋಟಿಗೆ ತಂದಿದ್ದೇವೆ. ಇನ್ನು ಮುಂದೆ ಆ ಘಟನೆ ನಡೆಯದಂಥ ರೀತಿಯಯಲ್ಲಿ ಮಾಡಿಕೊಂಡು ಬಂದಿದ್ದೇವೆ. ಇವೊತ್ತು ತಪ್ಪಾಗಿದೆ,ಇಲ್ಲವೆಂದಲ್ಲ, ಎಲ್ಲಿ ಪೋಲೀಸ್ ಅಧಿಕಾರಿಗಳು ಬಹಳ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಂಡು ಹೋಗಬೇಕಾಗಿತ್ತು. ಅಲ್ಲಿ ಬಹಳ ಸಹಜಪೂರ್ವಕವಾಗಿ ಅಲ್ಲಿ Situation ಕೂಡಾ anticipate ಮಾಡಿ ಆ್ಯಕ್ಷನ್ ತೆಗೆದುಕೊಳ್ಳಬೇಕಾಗಿತ್ತು ಎನ್ನುವುದು ಮಾನ್ಯ ಸದಸ್ಯರ ಒಂದು ಭಾವನೆ ಆಗಿದೆ. ಆದರೂ ಕೂಡಾ, ಹುಬ್ಬಳ್ಳಿ ಆಗಲೀ ಧಾರವಾಡವಾಗಲಿ, ಬೆಳಗಾವಿಯಾಗಲಿ, ಚೆನ್ನಪಟ್ಟಣವಾಗಲಿ ಮತ್ತು ಬೇರೆ ಕಡೆ ಮೂರು ಭಾಗಗಳಲ್ಲಾಗಿವೆ. ಯಡ್ರಾಮಿ ನನ್ನ ಕ್ಷೇತ್ರ. ಅಲ್ಲಿ ಎಂದೂ ಕೂಡ ಹಿಂದು - ಮುಸ್ಲಿಂ ಗಲಭೆ ಆಗಿಲ್ಲ. ಅಲ್ಲಿ ಏನಾಗಿದೆಯೆಂದರೆ ಬೇರೆ ಒಂದು ಭಿನ್ನಾಭಿಪ್ರಾಯದ ಮೇರೆಗೆ ಒಂದು ಪ್ರೊಸೆಷನ್ ಹೋಗತಕ್ಕಂಥ ರೀತಿಯಲ್ಲಿ ಕಲ್ಲು ತೂರಾಟದಲ್ಲಿ ಒಂದು ವ್ಯಕ್ತಿಗತವಾಗಿ ಆಗಿದೆ. ಈಗ ಅಲ್ಲಿ ಶಾಂತವಾಗಿದೆ. ಮತ್ತು ಚೆನ್ನಪಟ್ಟಣದಲ್ಲಿ ಸಹ ಶಾರ್ಟ್ ಸೆರ್ಕ್ಯುಟ್ ನಿಂದ ಸುಮಾರು ಐವತ್ತೆಂಟು ಸಾವಿರ ರೂಪಾಯಿಗಳ ಲುಕ್ಸಾನು ಆಗಿದೆಯೆಂದು ಮಾನ್ಯ ಸಿಂಧ್ಯರವರು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಸಹ ನಾವು ಕ್ರಮ ತೆಗೆದುಕೊಂಡಿದ್ದೇವೆ. ಇದು ದೇಶದಲ್ಲಿ ಬಹಳ ಸೂಕ್ಷ್ಮವಾದಂಥ ಸಮಸ್ಯೆಯಾಗಿದೆ. ನಾನು ಸ್ಪಷ್ಟವಾಗಿ

ಹೇಳಬೇಕಾದರೆ, ಇವೊತ್ತು ಬಹಳಷ್ಟು ಸಮಸ್ಯೆಗಳು ಬಡ ಜನರ. ದೇಶದ ಆರ್ಥಿಕ, ಸಾಮಾಜಿಕ ಸಮಸ್ಯೆಗಳು ಇರತಕ್ಕಂಥ ಸಮಯದಲ್ಲಿ ಎಲ್ಲಾ ಕಡೆ ಅನ್-ಎಂಪ್ಲಾಮೆಂಟ್ ಪ್ರಾಬ್ಲಮ್ ಇದೆ. ಫ್ರಸ್ಟ್ರೇರಶನ್ ಇದೆ. ಇಂಥ ಒಂದು ಸಂದರ್ಭದಲ್ಲಿ ಕೂಡಾ ಎಲ್ಲರೂ ತಮ್ಮ ಭಾವನೆಗಳನ್ನು ವ್ಯಕ್ತ ಮಾಡತಕ್ಕಂಥ ರೀತಿಯಲ್ಲಿ, ಪೂಜೆ ಮಾಡತಕ್ಕಂಥ ರೀತಿಯಲ್ಲಿ ಧರ್ಮದ ಬಗ್ಗೆ ಹೆಚ್ಚಿನ ರೀತಿಯಲ್ಲಿ ಅಭಿಮಾನ ಇಡತಕ್ಕಂಥ ಸ್ವಾತಂತ್ರ್ಯ ದೇಶದಲ್ಲಿರುವ ಎಲ್ಲಾ ಜನರಿಗೆ ಇದೆ. ಇದನ್ನು ತಿಳಿಸಿ ಹೇಳುವುದು. ಕೇವಲ ರಾಜಕೀಯ ಪಕ್ಷಗಳಿಗೆ ಮತ್ತು ರಾಜಕಾರಿಣಿಗಳಿಗೆ ಮಾತ್ರ ಸೀಮಿತವಾಗಿಲ್ಲ, ಒಂದು ಸಮಾಜದಲ್ಲಿರತಕ್ಕಂಥ ಎಲ್ಲಾ ಜನರು ಕೂಡಾ ಇದಕ್ಕೆ ಹೆಚ್ಚಿನ ರೀತಿಯಲ್ಲಿ ಸಹಕಾರ ಕೊಡಬೇಕಾಗುತ್ತದೆ. ಬೆಂಬಲ ಕೊಡಬೇಕಾಗುತ್ತದೆ. ಕೇವಲ ಪೋಲೀಸ್ ಇಲಾಖೆಯಿಂದ ಸರ್ಕಾರದಿಂದ ಸಾಧ್ಯವಿಲ್ಲವೆಂಬ ಮಾತನ್ನು ಕೂಡಾ ವ್ಯಕ್ತಪಡಿಸುತ್ತೇನೆ.

ಎಲ್ಲಾ ಪಕ್ಷಗಳನ್ನು ಕೂಡ ನಾನು ಇಂದು ಉಲ್ಲೇಖ ಮಾಡಿದ್ದೇನೆ. ಹುಬ್ಬಳ್ಳಿಯಾಗಲಿ, ಬೆಳಗಾಂ ಆಗಲಿ ಎಲ್ಲಾ ಪಕ್ಷಗಳು ಕೂಡ ಸಹಕರಿಸಿದ್ದಾರೆ. ಶಾಂತಿ ಸಭೆಗೆ ಎಲ್ಲಾರು ಸಹ ಬಂದಿದ್ದಾರೆ. ಯಾವ ರೀತಿ ಯಾವ ರಸ್ತೆಯಲ್ಲಿ ಮೆರವಣಿಗೆ ಹೋಗಬೇಕು ಎನ್ನತಕ್ಕ ಬಗ್ಗೆ ನಿರ್ಣಯ ಮಾಡಿದರೆ, ಅದನ್ನು ಎಲ್ಲಾರು ಬೆಂಬಲಿಸಿದ್ದಾರೆ. ವಿಶೇಷವಾಗಿ ನಮ್ಮ ಹಿಂಡಸಗೇರಿಯವರು ಈ ಒಂದು ಸದಸದ ಸದಸ್ಯರಾಗಿದ್ದಾರೆ. ಅವರು ಕೂಡ ಖುದ್ದಾಗಿ ನಿಂತು ಇದರ ಬಗ್ಗೆ ಹೆಚ್ಚಿನ ರೀತಿಯಲ್ಲಿ ಆಸಕ್ತಿಯನ್ನು ವಹಿಸಿ ಕೆಲಸ ಮಾಡಿದ್ದಾರೆ. ಆದರೂ ಕೂಡ ಇದು ಆಗಿದೆ. ದುರಾದೃಷ್ಟವಶಾತ್ ಇಂತಹ ಘಟನೆಯಾಗಿದೆ. ಆದರೂ ಒಂದೆರಡು ಕಡೆ ಆಗಿದೆ. ಈಗ ಹತೋಟಿಯಲ್ಲಿದೆ. ಈಗ ಇದರಿಂದ ಏನು ಪ್ರಾಪರ್ಟಿ ನಷ್ಟವಾಗಿದೆ, ಯಾವ ಕೋಮಿನ ಪ್ರಾಪರ್ಟಿ ನಷ್ಟವಾಗಿದೆ ಎನ್ನತಕ್ಕ ಬಗ್ಗೆ ಇಲ್ಲಿ ಬಹಿರಂಗವಾಗಿ ಚರ್ಚೆ ಮಾಡುವುದು ಸರಿಯಲ್ಲ, ಅದು ಸರ್ಕಾರದ ಗಮನಕ್ಕೆ ಬಂದಿದೆ. ಆದುದರಿಂದ ವಿರೋಧಪಕ್ಷದ ನಾಯಕರಿಗೆ, ಆಶ್ವಾಸನೆಯನ್ನು ಕೊಡುತ್ತಾ ಬರುತ್ತಿದ್ದೇನೆ. ಯಾರ್ಯಾರಿಗೆ ಈವತ್ತು ದಸ್ತಗಿರಿ ಮಾಡಿದ್ದಾರೆ, ಅವರನ್ನು ಬಿಡುಗಡೆ ಮಾಡತಕ್ಕ ಬಗ್ಗೆ ವಾಟಾಳ್ ನಾಗರಾಜ್‌ರವರು ಸಹ ಪ್ರಸ್ತಾಪ ಮಾಡಿದ್ದಾರೆ. ಅದನ್ನು ಸಹ ಮಾಡುತ್ತಿದ್ದೇನೆ. ಈವತ್ತು 144ನೇ ಕಲಮಿನ ಮೇರೆಗೆ ಇದ್ದ ಆಜ್ಞೆಯನ್ನು ಕೂಡ ತೆಗೆದುಹಾಕುತ್ತೇವೆ. ಯಾವಾಗಲೂ ಕೂಡ ಎಲ್ಲಾ ಕಡೆ ಬಹಳವಾಗಿ ಏನೆಂದರೆ, ಲೆಕ್ಕಾಹಾಕಿ ಇವರೇ ಮಾಡಿದ್ದಾರೆ. ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಹಿಡಿಯಬೇಕು ಎಂದು ಮಾಡುವುದಿಲ್ಲ, ಈಗಾಗಲೆ ಡಿ.ಐ.ಜಿ. ಯವರು ಮತ್ತು ಎಸ್.ಪಿ. ಜೊತೆ ಹಾಗೂ ಹುಬ್ಬಳ್ಳಿಯಲ್ಲಿರತಕ್ಕ ಪೋಲೀಸ್ ಕಮಿಷನರ್ ಜೊತೆ ಸಂಪರ್ಕ ಮಾಡಿದ್ದೇನೆ, ಅವರಿಗೆ ಹೇಳಿದ್ದೇನೆ. ಯಾರು ನಿರಪರಾಧಿಯಾಗಿದ್ದಾರೆ, ಕೆಲವರು ಕಾರ್ಪೊರೇಟರ್ಸ್ ಆಗಿದ್ದಾರೆಂದು ಕೂಡ ಮಾನ್ಯ ದೇಶಪಾಂಡೆಯವರು ಹೇಳಿದ್ದಾರೆ. ನಿನ್ನೆ ಕೂಡ ನಾಡಗೌಡರು ಪ್ರಸ್ತಾಪ ಮಾಡಿದರು. ಈ ಎಲ್ಲಾರನ್ನು ಬಿಡುಗಡೆ ಮಾಡಬೇಕೆಂದು ನಾನು ಈಗಾಗಲೆ ಹೇಳಿದ್ದೇನೆ. ಮತ್ತು ಮಲ್ಲಾರಿಗೌಡ ಪಾಟೀಲರು ಸಹ ಹೇಳಿದ್ದಾರೆ. ಒಂದು ಸಮಗ್ರವಾದಂತ ವಿವರವಾದಂತಹ ವರದಿ ಕೂಡ ಸರ್ಕಾರಕ್ಕೆ ಬರುತ್ತಿದೆ. ಯಾವ ರೀತಿ ಇದು ಪ್ರಾರಂಭವಾಯಿತು. ಯಾವ ರೀತಿಯಾಗಿ ಈ ಘಟನೆ ನಡೆಯಿತು. ಈ ಬಗ್ಗೆ ಸರ್ಕಾರ ಯಾವ ರೀತಿ ಕ್ರಮತೆಗೆದುಕೊಳ್ಳಬೇಕಾಗುತ್ತದೆ ಎಂಬುದನ್ನು ನಾವು ಹೇಳುತ್ತಿದ್ದೇವೆ. ಎಲ್ಲೆಲ್ಲಿ ಆಸ್ತಿಪಾಸ್ತಿಗಳು ನಷ್ಟವಾಗಿದೆ ಮತ್ತು ಎಷ್ಟು ಜನರನ್ನು ಬಂಧಿಸಿದ್ದಾರೆ ಮತ್ತು ಯಾವ ಕಾರಣದಿಂದ ಇದು ಮುಂದುವರೆಯುತ್ತಿದೆ ಎಂಬ

ಬಗ್ಗೆ ಕೂಡ ಸರ್ಕಾರ ಕ್ರಮತೆಗೆದುಕೊಳ್ಳುತ್ತೇವೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಮಾನ್ಯ ನಂಜುಂಡಸ್ವಾಮಿಯವರು ಸಹ ಈ ಬಗ್ಗೆ ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ಒಂದು ಹೇಳಿಕೆಯಲ್ಲಿ ಅವರು ಎತ್ತಿದಂತಹ ಪ್ರಶ್ನೆಗೆ ಉತ್ತರವನ್ನು ಕೊಡಲು ಆಗುವುದಿಲ್ಲ, ಯಾಕೆಂದರೆ ಅವರು ವಿಷೇಷವಾದ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈವತ್ತು ಆಗತಕ್ಕ ಘಟನೆಗಳಿಗೆ ಹಿನ್ನಲೆ ಏನು ಇದೆ, ಅದಕ್ಕೆ ಕಾರಣವೇನು ಇದೆ ಅದನ್ನು ಮೂಲಭೂತವಾಗಿ ಕಂಡುಹಿಡಿದು ಅದನ್ನು ನಿವಾರಣೆ ಮಾಡಬೇಕೆಂದು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಕೂಡ ಸರ್ಕಾರ ಗಮನ ಕೊಡುತ್ತದೆ. ಈವತ್ತು ಯಡಿಯೂರಪ್ಪನವರಿಗೆ ಪಾಟೀಳ್ ನಾಗರಾಜ್‌ರವರಿಗೆ ಉಪನಾಯಕರಾದ ಸಿಂಧ್ಯರಪ್ಪರಿಗೆ ದೇಶಪಾಂಡೆಯವರಿಗೆ ಮತ್ತು ನಮ್ಮ ಬೆಳಗಾವಿ ನಗರದಿಂದ ಬಂದಂತ : ಶ್ರೀಮಾನ್ ಕೌಜಲಗಿಯವರಿಗೆ ನಾನು ಭರವಸೆಯನ್ನು ಕೊಡುತ್ತಿದ್ದೇನೆ. ಈಗ ಪರಿಸ್ಥಿತಿ ಶಾಂತಿಯುತವಾಗಿದೆ. ಇದರ ಬಗ್ಗೆ ನಾವು ಹೆಚ್ಚಿನ ರೀತಿಯಲ್ಲಿ ಪ್ರಸ್ತಾಪ ಮಾಡುವುದು ಸೂಕ್ತವಲ್ಲ, ಇದಕ್ಕೆ ನಾವು ಇಲ್ಲೇ ಪೂರ್ಣವಿರಾಮವನ್ನು ಕೊಡೋಣಾ, ಮತ್ತು ಈ ಘಟನೆಯ ಬಗ್ಗೆ ತಮ್ಮ ಮನಸ್ಸಿನಲ್ಲಿ ಏನು ಒಂದು ಅನಿಸಿಕೆಯಾಗಿದೆ. ಅದನ್ನು ಸರ್ಕಾರ ಪೂರ್ಣವಾಗಿ ನಿವಾರಣೆ ಮಾಡುತ್ತದೆ ಎನ್ನತಕ್ಕ ಭರವಸೆಯನ್ನು ತಮ್ಮ ಮೂಲಕ ಕೊಡುತ್ತಿದ್ದೇನೆ.

+ ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಉಪಾಧ್ಯಕ್ಷಣೆಯವರೆ, ಮಾನ್ಯ ಸಚಿವರು ವಿವರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಮತ್ತು ಈ ಸಂದರ್ಭದಲ್ಲಿ ಬಂದಿಸಿರುವ ನಿರಪರಾಧಿ ಜನರನ್ನು ಬಿಡುಗಡೆ ಮಾಡುವ ಆದೇಶವನ್ನು ಕೊಟ್ಟಿದ್ದಾರೆ. ಬಹಳ ಸಂತೋಷ. ಒಂದು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಡಾ। ಅಬ್ದುಲ್ ಕರೀಮ್ ಭಾಷಿ ಎಂಬು ನಮ್ಮ ಪಕ್ಷದ ಕಾರ್ಪೊರೇಟರ್ ಅವರು ಎಂ.ಬಿ.ಬಿ.ಎಸ್. ಡಾಕ್ಟರ್ ಆಗಿದ್ದಾರೆ. ಅವರ ದವಾಖಾನೆಗೆ ನಗರದ ಪೋಲೀಸ್ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಹೆಡ್‌ಕಾನ್ಷೇಬಲ್ ಹೋಗಿ ಅವನ್ನು ಒದ್ದುಅವರನ್ನು ಕರೆದುಕೊಂಡು ಹೋಗಿ ಸಾಕಷ್ಟು ಹೊಡೆದಿದ್ದಾರೆ. ಅದರಿಂದಾಗಿ ಅವರು ಈವತ್ತು ಕೆ.ಎಂ.ಸಿ.ಯಲ್ಲಿ ಅಡ್‌ಮಿಟ್ ಆಗಿದ್ದಾರೆ. ಈ ರೀತಿಯಾದರೆ, ಇದಕ್ಕೆ ಪೋಲೀಸ್‌ನರವರೇ ಉತ್ತೇಜನವನ್ನು ಕೊಡುತ್ತಾರೆಂದು ನಾನು ಹೇಳಬೇಕಾಗುತ್ತದೆ. ಅದುದರಿಂದ ಇಂತಹ ಪೋಲೀಸ್ ಅಧಿಕಾರಿಯ ವಿರುದ್ಧ ತಾವು ಕ್ರಮ ತೆಗದುಕೊಳ್ಳಲು ಸಿದ್ಧರಾಗಿರಬೇಕಾಗುತ್ತದೆ. ಇದು ಬಹಳ ಮಹತ್ವವಾದ ಸಮಸ್ಯೆಯಾಗಿದೆ. ಅದುದರಿಂದ ತಾವು ಕ್ರಮ ತೆಗೆದುಕೊಳ್ಳಬೇಕು. ಮತ್ತು ಅವರು ಕೆಎಂಸಿಯಲ್ಲಿ ಉಪಚಾರವನ್ನು ಪಡೆಯುತ್ತಿದ್ದಾರೆ. ಅವರಿಗೆ ಆ ಉಪಚಾರವನ್ನು ಕೊಡತಕ್ಕ ಮತ್ತು ಅದರ ಎಲ್ಲಾ ವೆಚ್ಚವನ್ನು ಸರ್ಕಾರದ ವತಿಯಿಂದ ಕೊಡುವ ವ್ಯವಸ್ಥೆಯಾಗಬೇಕು. ಮತ್ತು ಅಲ್ಲಿದ್ದ ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಹೆಡ್‌ಕಾನ್ಷೇಬಲ್‌ಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಿಮ್ಮಲ್ಲಿ ಒತ್ತಾಯತರುತ್ತಿದ್ದೇನೆ. ಆಮೇಲೆ ತಾವು ಈ ಬೆಳಗಾಂ ಮತ್ತು ಹುಬ್ಬಳಿಯಲ್ಲಿ ಏನು ಈ ಘಟನೆಯಲ್ಲಿ ಕೆಲವರಿಗೆ ನಷ್ಟವಾಗಿದೆ. ಅವರಿಗೆ ಪರಿಹಾರವನ್ನು ಕೊಡುತ್ತೇವೆಂದು ಹೇಳಿದಿರಿ. ಬಹಳ ಸಂತೋಷ. ಆದರೆ ಈ ಪರಿಹಾರವನ್ನು ಎಷ್ಟು ದಿನದಲ್ಲಿ ಕೊಡುತ್ತೀರಿ. ಇದನ್ನು ನೀವು ನಿರ್ದಿಷ್ಟವಾಗಿ ಹೇಳಿಲ್ಲ, ಈವತ್ತು ನನ್ನ ಜಿಲ್ಲೆಯಲ್ಲಿ ಇಂತಹ ಘಟನೆಯಾದಾಗ ಪರಿಹಾರವನ್ನು ಸಾಕಷ್ಟು ಕೊಡದಿದ್ದರೂ ಕೂಡ ತಕ್ಷಣ ಪರಿಹಾರವನ್ನು ಕೊಡುವ ವ್ಯವಸ್ಥೆಯಾಗಿತ್ತು. ಆದುದರಿಂದ ಯಾರು ಗಾಯಗೊಂಡಿದ್ದಾರೆ ಅವರಿಗೆ ಎಷ್ಟು ದಿನದೊಳಗೆ ಕೊಡುತ್ತೀರಾ ಅದರ ಪ್ರಕಾರ ಬೆಳಗಾಂ ಮತ್ತು ಹುಬ್ಬಳಿಯಲ್ಲಿ

ಏನು ಆಸ್ತಿಪಾಸ್ತಿಗಳ ನಷ್ಟವಾಗಿದೆ. ಯಾರು ಗಾಯಗೊಂಡಿದ್ದಾರೆ ಅವರಿಗೆ ಎಷ್ಟು ದಿನದೊಳಗೆ ಪರಿಹಾರವನ್ನು ಕೊಡುತ್ತೀರಾ ಎಂಬ ಬಗ್ಗೆ ಸ್ಪಷ್ಟೀಕರಣ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಸನ್ಮಾನ್ಯ ಉಪಾಧ್ಯಕ್ಷರವರೆ, ಪೋಲೀಸ್ ಸ್ಟೇಷನ್‌ನಲ್ಲಿ ಕುಳಿತು ಪೋಲೀಸನವರು ಬರೆದು ಕೊಟ್ಟಂತಹ ಒಂದು ವರದಿಯ ಬಗ್ಗೆ ಇಲ್ಲಿ ಒಂದು ಸುದೀರ್ಘವಾದಂತಹ ಹೇಳಿಕೆಯನ್ನು ಕೊಟ್ಟಿದ್ದಾರೆ. ಅದರಲ್ಲಿ ಏನು ಅನುಮಾನವಿಲ್ಲ. ಇದು ಮಂತ್ರಿಗಳ ಭಾಷೆಯಲ್ಲಿ ಸಾಮಾನ್ಯವಾಗಿ ಇಂಥಾದ್ದು ಪೋಲೀಸ್‌ನವರು ಬರೆದುಕೊಡುವಂತಹದ್ದು, ಈ ಸಂದರ್ಭದಲ್ಲಿ ನಾವೆಲ್ಲರೂ ಈ ಸಭೆಯ ಮೂಲಕ ರಾಜ್ಯದ ಜನತೆಗೆ ರಾಜ್ಯದಲ್ಲಿ ಶಾಂತಿಯನ್ನು ಕಾಪಾಡಬೇಕೆಂದು ಮನವಿ ಮಾಡುತ್ತಿದ್ದೇವೆ. ನಮ್ಮ ಕರ್ನಾಟಕದಲ್ಲಿ ಸಮಗ್ರವಾಗಿ ನಾಲ್ಕು ಕೋಟಿ ಐವತ್ತು ಲಕ್ಷ ಕನ್ನಡ ಜನ ಇದ್ದೇವೆ. ಈ ರಾಜ್ಯದ ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡಬೇಕೆಂದು ಅವರನ್ನು ನಾವು ಕಳಕಳಿಯಿಂದ ಮನವಿ ಮಾಡುತ್ತೇವೆ. ಆದರೆ ಒಂದು ಪ್ರಶ್ನೆಯೇನೆಂದರೆ, ಇವರ ಹೇಳಿಕೆಯಲ್ಲಿ ಪೋಲೀಸ್‌ನವರಿಗೆ ತೊಂದರೆಯಾಯಿತು. ಅವರಿಗೆ ಏಟು ಬಿದ್ದಿತು. ನಂತರ ಲಾಟಿ ಚಾರ್ಜ್ ಆಯಿತು. ಅನಂತರ ಗುಂಡು ಹಾರಿಸಲಾಯಿತು. ಎಂದು ಬರೀ ಇದೇ ತರಹ ಇದೆ. ನಿರಪರಾಧಿ ಜನರ ಬಗ್ಗೆ ಸತ್ತಿರುವವರ ಬಗ್ಗೆ ಏಟು ತಿಂದಿರುವವರ ಬಗ್ಗೆ ಅಷ್ಟು ಅನುಕಂಪಗಳು ಇವರ ಹೇಳಿಕೆಯಲ್ಲಿ ಕಾಣುತ್ತಾ ಇಲ್ಲವೆಂದು ನಾನು ಹೇಳುತ್ತೇನೆ. ಇದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಗಾಳಿಯಲ್ಲಿ ಗುಂಡುಹಾರಿಸಬೇಕಾದರೆ, ಗೋಲಿಬಾರ್ ಮಾಡಬೇಕಾದರೆ ಸರ್ಕಾರದ ರೀತಿ ನೀತಿಗಳಿವೆ. ಗಾಳಿಯಲ್ಲಿ ಗುಂಡು ಹಾರಿಸಬೇಕಾದರೆ ಇಂಥವರಿಂದಲೇ ಒಂದು ಆಜ್ಞೆಯನ್ನು ತೆಗೆದುಕೊಳ್ಳಬೇಕು. ಒಂದೊಂದು ಸಾರಿ ನ್ಯಾಯಾಧೀಶರು ಹೇಳದೇ ಏಕಾಏಕಿ ಪೋಲೀಸ್‌ನವರು ಜನ ಬರುತ್ತಿದ್ದರು ಎಂದು ಗಾಬರಿಬಿದ್ದು ಆಕಾಶಕ್ಕೆ ಗುಂಡು ಹಾರಿಸುವುದು, ಮತ್ತು ಜನಕ್ಕೆ ಗುಂಡು ಹಾರಿಸುವುದು ಈ ರೀತಿ ಭಯೋತ್ಪಾದನೆ ಮಾಡುವುದರಿಂದ ಜನ ಈ ಪ್ರಮುಖವಾದ ಮೆರವಣಿಗೆ ಕೆಡಿಸುವ ಮಾತು ಆಮೇಲೆ ಇರಲಿ, ಆದರೆ ಪೋಲೀಸ್‌ನವರು ಜನರ ಮೇಲೆ ಲಾಟಿ ಚಾರ್ಜ್ ಮಾಡಿದ್ದರು.ಗುಂಡು ಹಾರಿಸಿದರು ಎಂಬ ಕಾರಣದಿಂದ ಈ ಪೋಲೀಸ್‌ನವರಿಗೂ ಜನತೆಗೂ ಇವತ್ತು ಹೋರಾಟ ಈ ಒಂದು ಹೋರಾಟ ನಡೆಯುತ್ತಿದೆ. ಇದು ನಾಮಕ ಧಾರ್ಮಿಕ ಹೋರಾಟಕ್ಕಿಂತ ಹೆಚ್ಚಾಗಿ ಪೋಲೀಸ್‌ನವರ ಅಜಾತುರ್ಯದಿಂದಲೇ ನಡೆಯುತ್ತಿದೆ. ತಮಗೆಲ್ಲಾ ಗೊತ್ತಿರುವ ಹಾಗೆ ಹೋದವರ್ಷ ಇಡೀ ರಾಜ್ಯದಲ್ಲಿ ಭೀಕರವಾದಂತಹ, ಗಂಭೀರವಾದಂತಹ ಪ್ರಕರಣಗಳು ಇಂತಹ ಉತ್ಸವಗಳು ನಡೆಯುವ ಸಂದರ್ಭದ್ಲಲಿ ನಡೆದವು. ಅಲ್ಲಿಂದ ಇಲ್ಲಿಯವರೆಗೂ ಪೋಲೀಸ್‌ನವರು ಈ ಉತ್ಸವಗಳು ನಡೆಯುವಾಗ ಏನೇನು ಮುಂಜಾಗರೂಕತೆ ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ಇದುವರೆಗೂ ತೆಗೆದುಕೊಂಡಿಲ್ಲ. ಹೋದ ವರ್ಷ ಮಾನ್ಯ ಮುಖ್ಯಮಂತ್ರಿಗಳು ಒಂದು ಏಕತಾ ಸಭೆಯನ್ನು ಕರೆದಿದ್ದರು.

ಉಪಾಧ್ಯಕ್ಷರು : ಅವರು ಸ್ಟೇಟ್‌ಮೆಂಟ್ ಮಾಡಿದ್ದಾರೆ. ಆ ಸ್ಟೇಟ್‌ಮೆಂಟ್ ಏನಾದರೂ ಸ್ಪಷ್ಟೀಕರಣ ಬೇಕಾಗಿದ್ದರೆ ಕೇಳಿ.

ಶ್ರೀ ವಾಟಾಳ್ ನಾಗರಾಜ್ : ಅವರ ಸ್ಟೇಟ್‌ಮೆಂಟ್‌ನಲ್ಲಿ ಏನು ಇರುತ್ತದೆಂದು ನನಗೆ ಗೊತ್ತು. ಅಲ್ಲಿ ಹೀಗೆ ನಡೆಯಿತು. ಇಲ್ಲಿ ಹೀಗೆ ನಡೆಯಿತು. ಅಲ್ಲಿ

144ನೇ ಸೆಕ್ಷನ್ ಜಾರಿ ಮಾಡಿದ್ದೇವೆ. ಅವರನ್ನು ಹಿಡಿದಿದ್ದೇವೆ. ಇವರನ್ನು ಬಿಟ್ಟಿದ್ದೇವೆ. ಬರೀ ಈ ತರಹ ಇದೆಯೇ ಹೊರತು ಅದಕ್ಕೆ ಪರಿಹಾರವಾಗಿ ನಮಗೆ ಅವರ ಹೇಳಿಕೆಯಲ್ಲಿ ಏನೂ ಸಿಗುತ್ತಿಲ್ಲ. ಅವರ ಮೇಲೆ ನನಗೆ ವೈಯಕ್ತಿಕವಾಗಿ ಅಪಾರವಾದ ಗೌರವವಿದೆ. ನಿಮ್ಮ ಪೋಲೀಸ್‌ನವರು ಮೊದಲು ಏನು ಎಫ್.ಐ.ಆರ್. ಹಾಕುತ್ತಾರಲ್ಲಾ ಆ ತರಹ ಈ ವರದಿ ಇದ್ದಹಾಗೆ ಇದೆ ನಂತರ ಚಾರ್ಜ್‌ಶೀಟ್ ಬರುತ್ತದೆ. ಆದ್ದರಿಂದ ಇಂತಹ ಒಂದು ಘಟನೆಗಳು ಹೊಸದೇನು ಅಲ್ಲ. ಇದು ಸಮಗ್ರವಾಗಿ ಪ್ರತಿವರ್ಷ ಎಲ್ಲಾ ಕಾಲದಲ್ಲೂ ನಡೆಯುತ್ತಿದೆ. ಈ ಘಟನೆಗಳನ್ನು ತಡೆಯುವುದಕ್ಕೆ ಏನಾದರೂ ಕ್ರಮವನ್ನು ತೆಗೆದುಕೊಳ್ಳಬೇಕು.

ಡಾ. ಎಸ್.ಬಿ. ನಂಜಪ್ಪ : ಸನ್ಮಾನ್ಯ ಉಪಸಭಾಧ್ಯಕ್ಷೆಯವರೆ, ಮಾನ್ಯ ಸದಸ್ಯರು ಮಾನ್ಯ ಗೃಹಮಂತ್ರಿಗಳು ಕೊಡುವಂತಹ ಸ್ಟೇಟ್‌ಮೆಂಟ್ ಸರಿಯಿಲ್ಲ. ಅನ್ನುವುದಾದರೆ, ಈ ಸ್ಟೇಟ್‌ಮೆಂಟ್‌ಗಳನ್ನು ಕೊಡುವಂತಹ ಸಂದರ್ಭದಲ್ಲಿ ಮಂತ್ರಿಗಳು ಯಾವ ರೀತಿ ಕೊಡಬೇಕು. ಯಾವ ರೀತಿ ಅದನ್ನು ತಯಾರು ಮಾಡಬೇಕು ಎಂದು ಹೇಳಿದರೆ ನಾವು ಕುಳಿತುಕೇಳಬಹುದು. ಅದನ್ನು ಬಿಟ್ಟು ಸುಮ್ಮನೆ ಕಥೆ ಹೇಳಿದರೆ ಈ ಸಭೆಯ ಕಾಲವೆಲ್ಲಾ ವ್ಯರ್ಥವಾಗುತ್ತದೆ.

ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ಅಧ್ಯಕ್ಷೆಯವರೆ ನಾನು ಹೇಳುವುದನ್ನು ಮಾನ್ಯ ಸದಸ್ಯರಿಗೆ ಕೇಳಲು ಇಷ್ಟವಿಲ್ಲದಿದ್ದರೆ ಗಂಭೀರವಾಗಿ ಹೊರಗಡೆ ಹೋಗಬಹುದು. ನಾವು ಇಲ್ಲಿ ಬರುವುದು ಹರಿಕಥೆ ಕೇಳುವುದಕ್ಕಲ್ಲ, ಚರ್ಚೆ ಮಾಡುವುದಕ್ಕೆ, ಈ ಎಮ್ಮೆಯಂತಹ ಚರ್ಮದ ಸರ್ಕಾರಕ್ಕೆ ಸುಧಾರಣೆ ಬಗ್ಗೆ ಏನು ಹೇಳುವುದು? ಈ ಎಮ್ಮೆಯಂತಹ ಕಲ್ಲಿನಂತಹ ಸರ್ಕಾರಕ್ಕೆ ಸುಧಾರಣೆ ಬಗ್ಗೆ ಹೇಳಬೇಕೆ? ಆದರೂ ನಾನು ಸುಧಾರಣೆ ಬಗ್ಗೆ ಹೇಳುತ್ತಿದ್ದೇನೆ. ಆದರೆ ಅದನ್ನು ಕೇಳುವಷ್ಟು ತಾಳ್ಮೆ ಇವರಿಗಿಲ್ಲ ನಾನು ಏನು ಹೇಳುತ್ತಿದ್ದೇನೆ ಅಂದರೆ ಪೋಲೀಸರ ವರದಿಯನ್ನೇ ಆಧಾರ ಇಟ್ಟುಕೊಳ್ಳಬೇಕಾಗಿಲ್ಲ. ಮಾನ್ಯ ಮಂತ್ರಿಗಳು ಈ ಪ್ರದೇಶಗಳಿಗೆ ಮೊದಲು ಭೇಟಿಕೊಡಬೇಕು. ಅಲ್ಲಿರತಕ್ಕಂಥ ಎಲ್ಲಾ ವರ್ಗದ ಮುಖಂಡರುಗಳನ್ನು ತಾವು ಕರೆಯಬೇಕು. ಅವರನ್ನು ಕರೆದು ಇಂತಹ ಪ್ರಕರಣಗಳು ನಡೆಯುವುದಕ್ಕೆ ಕಾರಣಗಳೇನು ಎಂದು ಕೇಳತಕ್ಕಂಥಾದ್ದು ಒಂದು. ಇನ್ನು ಸರ್ಕಾರವೇ ಒಂದು ಶಾಂತಿ ಸಮಿತಿ, ಐಕ್ಯತಾ ಸಮಿತಿ ಮಾಡಬೇಕೆಂದಿತ್ತು. ಆದರೆ ಅದು ಇದುವರೆಗೂ ಮಾಡಿಲ್ಲ. ಅದು ತಾಲ್ಲೂಕು ಮಟ್ಟದಲ್ಲೂ ಆಗಿಲ್ಲ. ಜಿಲ್ಲಾಮಟ್ಟದಲ್ಲೂ ಆಗಿಲ್ಲ, ಆದ್ದರಿಂದ, ಇಂತಹ ಸಮಿತಿಗಳನ್ನು ತಾವು ಮಾಡಬೇಕಾಗಿತ್ತು. ಈಗ ಗೋಲೀಬಾರ್ ಮಾಡುವಾಗ, ಗುಂಡು ಹಾರಿಸುವಾಗ, ಸರ್ಕಾರದ ನೀತಿ, ಏನಿರಬೇಕು ಸರ್ಕಾರದ ನೀತಿ ಪೋಲೀಸ್ ನೀತಿ ಏನಿರಬೇಕು ಎನ್ನತಕ್ಕಂತಾದ್ದನ್ನು ನಿರ್ಧಾರ ಮಾಡಲಿಕ್ಕೆ ಕಾನೂನಿನಲ್ಲಿ ಅನೇಕ ಅವಕಾಶಗಳು ಇವೆ. ಆ ನಿರ್ಧಾರಗಳ ಪ್ರಕಾರ ಅವರು ಗುಂಡುಹಾರಿಸಬೇಕೆ ಹೊರತು ಜನರು ಬಂದ ತಕ್ಷಣ ಗುಂಡು ಹಾರಿಸುತ್ತಾರೆ. ಬೇರೆ ಮಾತೇ ಇಲ್ಲ. ಸಾವಿರಾರು ಜನರ ಮೆರವಣಿಗೆ ನೋಡಿದ ತಕ್ಷಣ ಪೋಲೀಸರು ಏಕದಮ್ ತಮ್ಮ ಗೋಲೀಬಾರ್ ಬಿಚ್ಚುತ್ತಾರೆ. ಅದರ ಬಗ್ಗೆ ತಾವು ಏನು ಕ್ರಮ ಕೈಗೊಂಡಿದ್ದೀರಿ. ಎಂದು ದಯಮಾಡಿ ಹೇಳಿ. ಇನ್ನು ನಿಮ್ಮ ಪ್ರಕಾರ ಅನೇಕ ಜನರ ಬಿಡುಗಡೆ ಮಾಡಲಿಕ್ಕೆ ಹೇಳಿದ್ದೇವೆಂದು ಹೇಳಿದ್ದೀರಿ.ಇದರಲ್ಲಿ ಯಾರು ಅಪರಾಧಿಗಳು ಯಾರು ನಿರಪರಾಧಿಗಳು ಎಂದು ಹೇಳುವುದಕ್ಕೆ ತಾವು ಒಂದು ಸಮಿತಿ ಮಾಡಿ. ಆ ಸಮಿತಿಯ ಮೂಲಕ

ಇದನ್ನು ಪರಿಹಾರ ಮಾಡಲು ವ್ಯವಸ್ಥೆ ಮಾಡಿದ್ದೀರಾ ಎಂದು ತಾವು ದಯವಿಟ್ಟು ತಿಳಿಸಬೇಕು.

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಸನ್ಮಾನ್ಯ ಉಪಾಧ್ಯಕ್ಷೀಣಿಯವರೆ, ಬಹುಶಃ ಸರ್ಕಾರ ಸತ್ಯಕ್ಕೆ ತುಂಬಾ ಹತ್ತಿರವಾದಂಥ ವರದಿಯನ್ನು ಕೊಡುವಂಥ ಪ್ರಯತ್ನ ಮಾಡಿದೆ. ಆದ್ದರಿಂದ, ಮಾನ್ಯ ಗೃಹಸಚಿವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ವಾಸ್ತವಿಕ ಸಂಗತಿಯನ್ನು ತಿಳಿದುಕೊಂಡು ಆ ರೀತಿಯ ಒಂದು ವರದಿಯನ್ನು ತಾವು ಕೊಡುವಂಥ ಪ್ರಯತ್ನ ಮಾಡಿದ್ದೀರಿ. ಅದು ಬೆಳಗಾಂ ಇರಬಹುದು. ಹುಬ್ಬಳಿ ಇರಬಹುದು. ಸಮಯಕ್ಕೆ ಸರಿಯಾಗಿ ಪೋಲೀಸರು ಬಿಗಿಯಾದ ಕ್ರಮಕೈಗೊಳ್ಳದೇ ಇದ್ದಿದ್ದರೆ, ಪ್ರಾಮಾಣಿಕವಾಗಿ ಕೆಲಸ ಮಾಡಿಲ್ಲದೇ ಇದ್ದಿದ್ದರೆ, ದೊಡ್ಡ ಅನಾಹುತವಾಗುತ್ತಿತ್ತು. ಅದನ್ನು ತಪ್ಪಿಸಿದ್ದಾರೆ. ಅದಕ್ಕಾಗಿ ಪೋಲೀಸ್ ಅಧಿಕಾರಿಗಳಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅಧ್ಯಕ್ಷರೆ, ನಾನು ತಮ್ಮಲ್ಲಿ ಕೇಳಲಿಕ್ಕೆ ಇಚ್ಛಿಪಡುವಂತಾದ್ದು ಏನೆಂದರೆ ದಯಮಾಡಿ ಯಾವುದೇ ಒಂದು ಶಾಂತಿ ಸಮಾಧಾನ ಮಾಡುವಂತಾದ್ದು ಏನಿದೆ ಇದನ್ನು ಮಾಡೋಣ. ಆದರೆ ಇದೆಲ್ಲಾ ಆದಮೇಲೂ ಸಹ ತಪ್ಪು ಮಾಡಿದವರ ಮೇಲೆ ಬಿಗಿಯಾದಂಥ, ಕಠಿಣವಾಧಂಥ ಕ್ರಮ ತೆಗೆದುಕೊಳ್ಳುವಂಥ ಧೈರ್ಯವನ್ನು ಸರ್ಕಾರ ಇವೊತ್ತು ಮಾಡಬೇಕಾಗಿದೆ. ಇವೊತ್ತು ನಾವು ಹುಬ್ಬಳ್ಳಿಯದು ಮತ್ತೊಂದು ಬೆಳಗಾಂಗೆ ಸಂಬಂಧಪಟ್ಟಂತೆ ಹೇಳಿದ್ದೀರಿ. ನಾನು ಇಲ್ಲಿ ಯಾವುದೇ ಹಿಂದೂಗಳ ಮತ್ತು ಅಲ್ಪಸಂಖ್ಯಾತರ ವಿಚಾರ ಪ್ರಸ್ತಾಪಮಾಡಲಿಕ್ಕೆ ಇಷ್ಟಪಡುವುದಿಲ್ಲ, ಕೊನೆಪಕ್ಷ ಈ ಸದನದಲ್ಲಿ ಬೇರೆ ಬೇರೆ ರೀತಿಯಲ್ಲಿ ಈ ರೀತಿಯ ಘಟನೆಗಳು ನಡೆದಾಗ ಅದಕ್ಕೆ ಬಣ್ಣ ಕೊಡುವಂಥ ಪ್ರಯತ್ನ ಆಗುತ್ತಿರುವಂಥ ಸಂದರ್ಭದಲ್ಲಿ ದಯಮಾಡಿ ಈ ಬೆಳಗಾಂ ಮತ್ತು ಹುಬ್ಬಳ್ಳಿ ಘಟನೆಗಳ ಬಗ್ಗೆ ನ್ಯಾಯಾಂಗ ತನಿಖೆ ಮಾಡಿ ಏಕೆಂದರೆ ತಾವು ನ್ಯಾಯಾಂಗ ತನಿಖೆ ಮಾಡುವುದರಿಂದ, ಏನೆಂಬುದು ಗೊತ್ತಾಗುತ್ತದೆ. ಈ ಎರಡು ಪ್ರಕರಣಗಳಲ್ಲಿ ಮೇಲೆ ಕಾಣುತ್ತಿರುವಂಥ ಸಂಗತಿ ಏನು, ಅದು ಅಲ್ಪಸಂಖ್ಯಾತರು ಇರಲಿ, ಹಿಂದೂಗಳು ಇರಲಿ, ಮೆರವಣಿಗೆ ನಡೆದಾಗ ಪೋಲೀಸರ ಅನುಮತಿಯನ್ನು ತೆಗೆದುಕೊಂಡು ಒಂದು ರಸ್ತೆಯಲ್ಲಿ ಹೋಗಬೇಕೆಂದು ನಿಶ್ಚಯ ಆದಮೇಲೆ ಆ ರೀತಿ ಅಲ್ಲಿ ಹೋಗಬೇಕು. ಅಡ್ಡಿ ಆತಂಕಗಳನ್ನು ಯಾರೂ ಸಹ ಮಾಡಬಾರದು.

ಉಪಾಧ್ಯಕ್ಷೀಣಿಯವರು : ಮಾನ್ಯ ಮಂತ್ರಿಗಳ ಸ್ಟೇಟ್‌ಮೆಂಟ್ ಮೇಲೆ ತಾವು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ಈ ಸ್ಟೇಟ್‌ಮೆಂಟಿನಲ್ಲಿರತಕ್ಕದ್ದನ್ನು ತಾವು ನೋಡಬೇಕು.

"ಮುಸ್ಲಿಂ ಮುಖಂಡರು ಮತ್ತು ಸ್ಥಳೀಯ ಶಾಸಕಾರಾದ ಶ್ರೀ ಎಂ.ಎಂ. ಹಿಂಡಸಗೇರಿಯವರು ಮುತುವಲ್ಲಿಯವರ ಜೊತೆಗೆ ಚರ್ಚಿಸಿ, ಈದ್ ಮೆರವಣಿಗೆಯ ಮಾರ್ಗವನ್ನು ಗೊತ್ತುಪಡಿಸಿ, ಆ ಮಾರ್ಗದಲ್ಲಿ ಮೆರವಣಿಗೆ ತೆಗೆದುಕೊಂಡು ಹೋಗಲು ಅನುಮತಿ ಬೇಡಿ ದಿನಾಂಕ 15-9-91ರಂದು ಪತ್ರವೊಂದನ್ನು ಬರೆದರು. ಇದರಂತೆ, ಪೋಲೀಸರು ಈ ಮಾರ್ಗದಲ್ಲಿಯೇ ಮೆರವಣಿಗೆಯನ್ನು ತೆಗೆದುಕೊಂಡು ಹೋಗಲು ಅನುಮತಿಯನ್ನೂ ನೀಡಿದರು."

ಅವರು ಅನುಮತಿಯನ್ನು ನೀಡಿದ ಮೇಲೆ ಅದೇ ರಸ್ತೆಯಲ್ಲಿ ಹೋಗುವಂಥ ಸಂದರ್ಭದಲ್ಲಿ, ದುರ್ಗದ ಬಯಲು ಕಡೆ ಹೋಗುವಂಥ ಒಂದು ಪ್ರಯತ್ನವನ್ನು ಮಾಡಿದರು. ಮಂಗಳವಾರ ಪೇಟೆಗೆ ಮಾತ್ರ ಅನುಮತಿ ಕೊಟ್ಟಿತ್ತು ಎಂದು ತಾವು ಇದರಲ್ಲಿ ಹೇಳಿದ್ದೀರಿ ದುರ್ಗದ ಬಯಲು ಕಡೆ ಹೋಗಿದ್ದು ಏತಕ್ಕೆ? ಅವೊತ್ತು ಚರ್ಚೆಯಾದಾಗ ಸಾಯಂಕಾಲ 3-4 ಗಂಟೆಯವರೆಗೆ ನಮ್ಮ ಈದ್‌ಮಿಲಾದ್ ಇದಕ್ಕೆ ಸಂಬಂಧಪಟ್ಟಂಥ ಹಬ್ಬ ಆಗಬೇಕು. 8 ಗಂಟೆಯ ಮೇಲೆ ಗಣಪತಿಯ ಹಬ್ಬದ ಮೆರವಣಿಗೆ ಪ್ರಾರಂಭವಾಗಬೇಕೆಂದು ಇತ್ತು. ಮೆರವಣಿಗೆ ಹೋದಂತವರು ಎಲ್ಲಿ ಅನುಮಂತಿಯನ್ನು ಕೊಟ್ಟಿದ್ದರು ಆ ಪ್ರಕಾರ ಮಂಗಳವಾರ ಪೇಟೆ ಕಡೆ ಮಾತ್ರ ಹೋಗಬೇಕಾಗಿತ್ತು. ಆದರೆ ಅದು ಬಿಟ್ಟು ಗಣಪತಿ ಪೆಂಡಾಲ್ ಇರುವ ಕಡೆ ಹೋಗುವಂಥ ಪ್ರಯತ್ನ ಮಾಡಿದರು. ಗಲಭೆಗಳು ಪ್ರಾರಂಭವಾಗುವಂಥ ಪ್ರಯತ್ನ ಆಯಿತು. ಆಗ ಪೋಲೀಸರು ಕ್ರಮ ತೆಗೆದುಕೊಂಡಿದ್ದಾರೆ ಅದು ಒಂದು. ಇನ್ನೊಂದು ಬೆಳಗಾಂನಲ್ಲಿ ಗಣಪತಿ ಉತ್ಸವದ ಮೆರವಣಿಗೆ ಎಲ್ಲಿ ಹೋಗಬೇಕೆಂದು ಹೇಳಿ ನಿಶ್ಚಯವಾಯಿತು. ಆ ರಸ್ತೆ ಎಲ್ಲಿ ನಿಶ್ಚಯವಾಗಿತ್ತೋ ಅದೇ ರಸ್ತೆಯಲ್ಲಿ ಹೋಗುವಂಥ ಪ್ರಯತ್ನದಲ್ಲಿ ಗಣಪತಿ ಮೆರವಣಿಗೆಗಾರರು ಹೋದರು. ಮೊದಲೇ ನಿರ್ಧರಿಸಿದ್ದರ ಪ್ರಕಾರ ಆ ರಸ್ತೆಗಳ ಮುಖಾಂತರ ಗಣೇಶ ವಿಗ್ರಹಗಳು ಪೋಲೀಸ್ ಬಿಗಿ ಬಂದೋಬಸ್ತಿನಲ್ಲಿ ಮೆರವಣಿಗೆ ತೆಗೆದುಕೊಂಡು ಹೋಗಿ ಈ ಮೊದಲೇ ಗೊತ್ತುಪಡಿಸಿದ ಕಾರ್ಯಕ್ರಮದಂತೆ ವಿಸರ್ಜನೆ ಮಾಡಲಾಯಿತೆಂದು ಹೇಳುತ್ತೀರಿ.

ಆದರೆ ಇಲ್ಲಿ ಒಂದನ್ನು ತಾವು ಹೇಳುತ್ತಾ, ಇಲ್ಲಿ ನೀವು ಬೆಳಗಾಂ ಬಗ್ಗೆ ಹೇಳುವಂಥ ಸಂದರ್ಭದಲ್ಲಿ

ಗಣೇಶ ಪ್ರತಿಮೆಯ ಮೆರವಣಿಗೆ 6-10ಕ್ಕೆ ಪ್ರಾರಂಭವಾಯಿತು.

ಸುಮಾರು 100 ವಿಗ್ರಹಗಳು ಮೆರವಣಿಗೆಯಲ್ಲಿದ್ದವು.

ಸುಮಾರು 8.30ರ ಹೊತ್ತಿಗೆ ಚಾವಟ್‌ಗಲ್ಲಿಯ ಸುಮಾರು 100-150 ಜನರ ಒಂದು ಗುಂಪು ಆ ಮಾರ್ಗದಲ್ಲಿ ಹೊರಟಿದ್ದ 5 ಗಣೇಶ ವಿಗ್ರಹಗಳ ಮೆರವಣಿಗೆಯನ್ನು ತಡೆದರು. ಎಂದು ಇದೆ.

ಮಾನ್ಯ ಉಪಾಧ್ಯಕ್ಷಿಣಿಯವರೆ, ಇಲ್ಲಿ ಬಹಳ ಪ್ರಮುಖವಾದ ಸಂಗತಿ ಎಂದರೆ ಈದ್‌ಮಿಲಾದ್ ಹಬ್ಬದ ಮೆರವಣಿಗೆ ಹೋದಾಗ ಯಾವ ರಸ್ತೆಯಲ್ಲಿ ಹೋಗುವುದಕ್ಕೆ ಅನುಮತಿ ಕೊಟ್ಟಿದ್ದರೋ ಅಲ್ಲಿ ಹೋಗದೆ ಗಣಪತಿ ಇರುವ ಕಡೆಗೆ ಹೋಗುವಂಥ ಪ್ರಯತ್ನಮಾಡಿ ಅಲ್ಲಿ ಗಲಭೆ ಪ್ರಾರಂಭವಾಯಿತು. ಬೆಳಗಾಂನಲ್ಲಿ ಗಣಪತಿ ಮೆರವಣಿಗೆ ಹೋಗತಕ್ಕ ಸಂದರ್ಭದಲ್ಲಿ ಎಲ್ಲಿ ಅನುಮತಿಯನ್ನು ಕೊಟ್ಟಿದ್ದರೋ ಅಲ್ಲಿ ಮೆರವಣಿಗೆ ಹೋಗಬೇಕಾದರೆ ಆ ರಸ್ತೆಯಲ್ಲಿ ಹೋಗದಂತೆ ಅಲ್ಪಸಂಖ್ಯಾತರು ತಡೆದರು. ಹೀಗಾಗಿ ಗಲಭೆಗಳು ಪ್ರಾರಂಭವಾಗಿವೆ ಎಂದು ತಾವೇ ಹೇಳಿದ್ದೀರಿ. ಆದುದರಿಂದ ನಾನು ಹೇಳತಕ್ಕದ್ದೆಂದರೆ, ಒಂದು, ನಿರ್ಧಾಕ್ಷಿಣ್ಯವಾಗಿ ತಪ್ಪು ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳಿ. ಎರಡನೆಯದಾಗಿ ಅಲ್ಲಿ ಶಾಂತಿ ನೆಲೆಸಬೇಕಾದರೆ, ಈ ಸರ್ಕಾರದಲ್ಲಿ ನಂಬಿಕೆ ಬರಬೇಕಾದರೆ ನ್ಯಾಯಾಂಗ ತನಿಖೆ ಮಾಡಿಸಿ. ಮೂರನೆಯದಾಗಿ ಅಲ್ಲಿ ಆಗಿರತಕ್ಕ ನಷ್ಟಕ್ಕೆ ಯಾವುದೇ ಭೇದಭಾವವಿಲ್ಲದೆ, ಸರಿಯಾದ ರೀತಿಯಲ್ಲಿ ಪರಿಹಾರವನ್ನು ಕೊಡಿಸಿ. ಇನ್ನೊಂದು ಪ್ರಮುಖ ವಿಚಾರ ಎಂದರೆ, ಕಳೆದ 8-10 ವರ್ಷದಿಂದೀಚೆಗೆ ಅಲ್ಪಸಂಖ್ಯಾತರ ಮೆರವಣಿಗೆ ಸಂದರ್ಭದಲ್ಲಿ,

ಹಿಂದೂಗಳ ಮೆರವಣಿಗೆ ಸಂದರ್ಭದಲ್ಲಿ ಎಷ್ಟೆಷ್ಟು ಗಲಾಟೆಗಳಾಗಿವೆ, ಗಲಭೆಗಳಾಗಿವೆ, ಇದಕ್ಕೆ ಕಾರಣರು ಯಾರು? ಎನ್ನುವುದರ ಬಗ್ಗೆ ತನಿಖೆ ಮಾಡಿಸಿ ಸರ್ಕಾರ ವರದಿಯನ್ನು ತರಿಸಿಕೊಳ್ಳಬೇಕು. ಇದು ಬಹಳ ಪ್ರಮುಖವಾದ ವಿಚಾರ.

ಉಪಾಧ್ಯಕ್ಷಿಣಿಯವರು : ನೀವು ಒಂದೋ, ಎರಡೋ ವಿಷಯಗಳ ಬಗ್ಗೆ ಮಾತ್ರ ಪ್ರಸ್ತಾಪ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಕೇವಲ ಕ್ಲಾರಿಫಿಕೇಷನ್ ಕೇಳುವುದು ಅಲ್ಲ. ಇದಕ್ಕೆ ಪರಿಹಾರವನ್ನು ಹುಡುಕಬೇಕಾಗಿದೆ. ಆದುದರಿಂದ ಇದರ ಬಗ್ಗೆ ಅಂದರೆ ಈ ಎರಡು ಘಟನೆಗಳ ಬಗ್ಗೆ ನ್ಯಾಯಾಂಗ ತನಿಖೆ ಆಗಬೇಕು. ಪರಿಹಾರವನ್ನು ಸರಿಯಾಗಿ ಒದಗಿಸಿಕೊಡಬೇಕು. ಅರೆಸ್ಟ್ ಮಾಡಿರತಕ್ಕ ನಿರಪರಾಧಿಗಳನ್ನು ಬಿಡಬೇಕು. ಯಾವುದೇ ಪ್ರಭಾವಕ್ಕೆ ಒಳಗಾಗದೆ ಯಾರು ತೊಂದರೆ ಮಾಡಿದ್ದಾರೆ, ಯಾರು ತಪ್ಪಿತಸ್ಥರಿದ್ದಾರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಈಚೆಗೆ 10 ವರ್ಷದಲ್ಲಿ ರಾಜ್ಯದಲ್ಲಿ ನಡೆದಿರತಕ್ಕ ಹಿಂದೂ ಉತ್ಸವ ಇರಲಿ, ಮುಸ್ಲಿಂ ಉತ್ಸವ ಇರಲಿ, ಯಾವ ಯಾವ ಮೆರವಣಿಗೆಗಳಲ್ಲಿ ಎಷ್ಟೆಷ್ಟು ಘಟನೆಗಳು, ಗಲಭೆಗಳು ಆಗಿವೆ ಎಂಬುದನ್ನು ತನಿಖೆ ಮಾಡಿಸಿ ವರದಿಗಳನ್ನು ತರಿಸಿಕೊಂಡರೆ ಆಗ ಈ ಗಲಭೆಗಳಿಗೆ ಕಾರಣ ಏನು, ಉದ್ದೇಶ ಏನೆಂಬುದು ಅರ್ಥವಾಗುತ್ತದೆ. ಆಗ ಅಲ್ಪಸಂಖ್ಯಾತರು, ಹಿಂದೂಗಳು ಗೌರವದಿಂದ, ಪ್ರೀತಿವಿಶ್ವಾಸದಿಂದ ಅಣ್ಣತಮ್ಮಂದಿರಂತೆ ಬಾಳುವುದಕ್ಕೆ ಅನುಕೂಲವಾಗುತ್ತದೆ. ಕೇವಲ ಶಾಂತಿ ಸಮಿತಿಯನ್ನು ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ನೀವು ಕಠಿಣ ಕ್ರಮ ತೆಗೆದುಕೊಳ್ಳಬೇಕು. ದಯವಿಟ್ಟು ನ್ಯಾಯಾಂಗ ತನಿಖೆ ಮಾಡಬೇಕು. ಇಲ್ಲದಿದ್ದರೆ ಸರ್ಕಾರದ ಬಗ್ಗೆ ಯಾರಿಗೂ ವಿಶ್ವಾಸ, ನಂಬಿಕೆ ಉಳಿಯುವುದಿಲ್ಲ ಎಂದು ಹೇಳಬಯಸುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ವಿರೋಧ ಪಕ್ಷದ ಉಪನಾಯಕರು) : ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಗೃಹ ಸಚಿವರು ತಮ್ಮ ಅಧಿಕಾರಿಗಳ ಮುಖಾಂತರ ಬಂದಿರತಕ್ಕ ವರದಿಯನ್ನು, ನಮ್ಮ ಮುಂದೆ ಒಂದು ಹೇಳಿಕೆಯ ರೂಪದಲ್ಲಿ ಮಂಡಿಸಿದ್ದಾರೆ. ನನ್ನ ಅಲ್ಪ ಅನುಭವದಲ್ಲಿ ಹೇಳುವುದಾದರೆ ಹಿಂದೂ ಮುಸ್ಲಿಂ ಗಲಭೆಗಳು ಹೇಗೆ ನಡೆಯುತ್ತವೆ ಎಂದರೆ ಒಂದು ಕೈ ತಟ್ಟುವುದರಿಂದ ಚಪ್ಪಾಳೆ ಆಗುವುದಿಲ್ಲ. ಎರಡೂ ಕೈ ಸೇರಿದರೆ ಮಾತ್ರ ಚಪ್ಪಾಳೆಯಾಗುತ್ತದೆ. ಇದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ.

ಎರಡನೆಯದಾಗಿ ಈ ಶಾಂತಿ ಸಮಿತಿಗಳಿಗೆ ನನ್ನ ಅಭಿಪ್ರಾಯದಲ್ಲಿ ಅರ್ಥವೇ ಇಲ್ಲ. ಇವು ಪ್ರಾರಂಭ ಆಗುವವರೆಗೆ ಮಾತ್ರ ಶಾಂತಿ ಸಮಿತಿಗಳು. ಇವು ಪ್ರಾರಂಭವಾದ ಮೇಲೆ ಶಾಂತಿ ಸಮಿತಿಗಳ ಮಾತನ್ನು ಯಾರೂ ಕೂಡ ಕೇಳುವುದಿಲ್ಲ. ಆದುದರಿಂದ ವಾಸ್ತವಾಂಶ ಏನೆಂಬುದನ್ನು ತಿಳಿದಪಕೊಳ್ಳಬೇಕು. ತಾವು ಹೇಳಿದಂತೆ ಈ ರಾಜ್ಯದ ಪ್ರಗತಿಯನ್ನು, ಬಡವರ ಸಮಸ್ಯೆಗಳನ್ನು, ರಾಷ್ಟ್ರದ ಸಮಸ್ಯೆಗಳನ್ನು ಪರಿಹರಿಸಬೇಕೆಂದಿದ್ದರೆ, ನಾವೆಲ್ಲರೂ ಕೂಡ ಈ ದಿಸೆಯಲ್ಲಿ ಜನರಿಗೆ ಶಿಕ್ಷಣ ಕೊಡುವುದಕ್ಕೆ ನಾವು ಪ್ರಯತ್ನ ಮಾಡಬೇಕಾಗುತ್ತದೆ. ಇತ್ತೀಚೆಗೆ ನ್ಯಾಷನಲ್ ಇಂಟಿಗ್ರೇಷನ್ ಸಮಿತಿಯ ಸಭೆಯನ್ನು ತಾವು ಕರೆದಿದ್ದಿರಿ. ನಮಗೆ ಸುದ್ದಿ ಸ್ವಲ್ಪ ತಡವಾಗಿ ತಲುಪಿತು. ಸಕಾಲದಲ್ಲಿ ನಮಗೆ ಸುದ್ದಿ ತಲುಪಿದ್ದಿದ್ದರೆ ನಾವೂ ಸಹ ಆ ಸಭೆಗೆ ಬರುತ್ತಿದ್ದೆವು. ಈ ವಿಚಾರವನ್ನು ನಾನು ಪ್ರಸ್ತಾಪ ಮಾಡತಕ್ಕದ್ದು ಬಹಳ ಇದೆ. ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಹೇಳಿದಂತೆ

ಆಗಿಂದಾಗ್ಗೆ ಈ ಸಮಿತಿಯ ಸಭೆಯನ್ನು ಕರೆಯಬೇಕೆಂಬುದು ನನ್ನ ಮೊದಲನೇ ಸಲಹೆ.

ಇನ್ನು ಎರಡನೇ ಸಲಹೆ ಎಂದರೆ ತಾವು ಈಗಾಗಲೇ ಕೆಲವು ಸೆನ್ಸಿಟಿವ್ ಏರಿಯಾಗಳನ್ನು ಐಡೆಂಟಿಫೈ ಮಾಡಿರುವುದಾಗಿ ಹೇಳಿದ್ದೀರಿ. ಈ ಸೆನ್ಸಿಟಿವ್ ಏರಿಯಾಗಳನ್ನು ಯಾವರೀತಿ ಐಡೆಂಟಿಫೈ ಮಾಡಿದ್ದೀರಿ ಅದೇರೀತಿ ಈ ಗುಂಪು ಘರ್ಷಣೆಗೆ ಕಾರಣವಾಗಿರತಕ್ಕ ವ್ಯಕ್ತಿಗಳ ಪಟ್ಟಿಯನ್ನು ಮಾಡಬೇಕು.

ಬಹುಶಃ ಇಷ್ಟರೊಳಗೆ ತಮ್ಮ ಇಲಾಖೆಯವರು ಆ ಪಟ್ಟಿಯನ್ನು ಮಾಡಿದ್ದಾರೆಂದು ನನ್ನ ಅಭಿಪ್ರಾಯ. ಇನ್ನೂ ಎಲ್ಲೆಲ್ಲಿ ಇಂಥ ಪಟ್ಟಿಯನ್ನುಮಾಡಿಲ್ಲ ಅಂತಹ ಎಲ್ಲ ಕಡೆಯಲ್ಲೂ ಪಟ್ಟಿಯನ್ನುಮಾಡಿ ಅಂಥ ವ್ಯಕ್ತಿಗಳನ್ನು ಕನಿಷ್ಠ ಪಕ್ಷ 4-5 ದಿನಗಳ ಹಿಂದೆಯೇ ಹಿಡಿದು ಬಂಧನದಲ್ಲಿಡಬೇಕು. ತಾವು ನಿರ್ದಾಕ್ಷಿಣ್ಯವಾಗಿ ಅವರಮೇಲೆ ಕ್ರಮ ತೆಗೆದುಕೊಳ್ಳಬೇಕು. ಇದರಲ್ಲಿ ಅವರು ಆಡಳಿತ ಪಕ್ಷದವರು ಇರಲಿ, ವಿರೋಧಪಕ್ಷದವರು ಇರಲಿ, ಬೇರೆ ಯಾವುದೇ ಪಕ್ಷದವರು ಇರಲಿ, ಅವರ ಕೈವಾಡ ಅಲ್ಲಿರತಕ್ಕ ಕೆಳಮಟ್ಟದ ಪೋಲಿಸ್ ಅಧಿಕಾರಿಗಳ ಜೊತೆ ಇರತಕ್ಕ ಒಂದು ಬಾಂಧವ್ಯ ಏನಿರುತ್ತದೆ ಅದನ್ನು ಮುರಿದು ಅವರಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು.

ಇನ್ನು ಮೂರನೆಯದಾಗಿ ಮತ್ತು ಕೊನೆಯದಾಗಿ ಬಹಳ ಪ್ರಮುಖವಾಗಿರತಕ್ಕದ್ದು ಎಂದರೆ ನಮ್ಮ ಪೋಲಿಸ್ ಇಲಾಖೆಯಲ್ಲಿ ಕೆಳಮಟ್ಟದ ಜನರು ಯಾರಿದ್ದಾರೆ, ಅವರಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಕೊಲೆ ಆಗಲಿ, ಸುಲಿಗೆ ಆಗಲಿ, ಇನ್ನು ಬೇರೆ ಏನೇ ಘಟನೆಗಳು ಸಂಭವಿಸಲಿ, ಪೋಲಿಸ್ ಇಲಾಖೆ ತಪ್ಪಿದರೆ ರೆವಿನ್ಯೂ ಇಲಾಖೆ ಈ ಎರಡೇ ಇಲಾಖೆಯ ಅಧಿಕಾರಿಗಳನ್ನು ನಾವು ಕಳುಹಿಸಿಕೊಡುತ್ತೇವೆ.

ಇವತ್ತು ಇರತಕ್ಕಂಥ ಜನಸಂಖ್ಯೆಗೆ ಅನುಗುಣವಾಗಿ ಪೋಲೀಸ್ ಸಿಬ್ಬಂದಿಯನ್ನು ಹೆಚ್ಚು ಮಾಡಲು ಆಗಿಲ್ಲ ಅದಕ್ಕೆ ನಾನು ಸಲಹೆ ಕೊಡುವುದೆಂದರೆ, ಪ್ರತಿಯೊಂದು ಸಾರಿ ಈ ರೀತಿ ನಷ್ಟವಾದಾಗ ಸರ್ಕಾರ ಎರಡುಕೋಟಿ ಮೂರು ಕೋಟಿ ಪರಿಹಾರ ಕೊಟ್ಟುಕೊಂಡೇ ಬರುತ್ತಿದೆ. ತಾವು ಆಸ್ತಿ ಕಳೆದುಕೊಂಡರೆ ಪರಿಹಾರವನ್ನು ಕೊಡಬಹುದು. ಆದರೆ ಜೀವಕ್ಕೆ ಹಾನಿಯಾದರೆ ಅದಕ್ಕೆ ತಾವು ಪರಿಹಾರವನ್ನು ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಇದನ್ನು ಆದಷ್ಟೂ ಕಡಿಮೆ ಮಾಡಬೇಕೆಂದರೆ ಇದನ್ನು ನಿಯಂತ್ರಣದಲ್ಲಿ ಇರಬೇಕು. ಇವತ್ತು ಕೇಂದ್ರ ಸರ್ಕಾರ ಕೂಡ ಈ ನಿಟ್ಟಿನಲ್ಲಿ ವಿಚಾರ ಮಾಡುತ್ತಿದೆ. ಇದಕ್ಕಾಗಿಯೇ ಒಂದು ವಿಶೇಷವಾದ ಪೋಲೀಸ್ ಸಿಬ್ಬಂದಿಯನ್ನು ನೇಮಕ ಮಾಡಬೇಕು. ಕೋಮುಘರ್ಷಣೆ ನಿಯಂತ್ರಣ ಮಾಡಲಿಕ್ಕೆ, ಉಸ್ತುವಾರಿ ಮಾಡಲಿಕ್ಕೆ ಒಂದುಸಾವಿರ ಅಥವಾ ಎರಡುಸಾವಿರ ಜನ ಇರುವ ಒಂದು ಪಡೆ ಇರಬೇಕು. ಈಗ ಡೆಲ್ಲಿಯಲ್ಲಿ, ರಾಷ್ಟ್ರದ ಬೇರೆ ಬೇರೆ ಕಡೆಗಳಲ್ಲಿ ಯಾರು ಪ್ರಮುಖರಿದ್ದಾರೆ ಅವರ ಜೀವನಕ್ಕೆ ಅಪಾಯವಿದೆ ಎಂದು ಕಂಡುಬಂದಾಗ ಅಂಥವರ ರಕ್ಷಣೆಗೆ ಒಂದು ಕಮಾಂಡೋ ಪಡೆಗಳನ್ನು ಇಟ್ಟಿದ್ದಾರೆ. ಇದು ಮಾನ್ಯ ಧರ್ಮಸಿಂಗ್‌ರವರಿಗೆ ಗೊತ್ತಿದೆ, ಈ ಒಂದು ಸಂದರ್ಭದಲ್ಲಿ ತಮಗೆ ನಾವು ಸಲಹೆ ಕೊಡುವುದೇನೆಂದರೆ, ಅದೇ ರೀತಿಯಲ್ಲಿ ಅಗತ್ಯವಾಗಿ ಇದನ್ನು ಮಾಡಬೇಕಾಗಿದೆ. ವರ್ಷ ವರ್ಷ ಕೋಟಿಗಟ್ಟಲೆ ಆಸ್ತಿಯನ್ನು ಹಾಳುಮಾಡಿ ಕೊಂಡು ಪ್ರಾಣಗಳನ್ನು ಹಾಳುಮಾಡಿಕೊಳ್ಳುವ ಬದಲಾಗಿ ಒಂದುಕೋಟಿ ಎರಡು ಕೋಟಿ ಹಣವನ್ನು ಖರ್ಚುಮಾಡಿ ಒಂದುಸಾವಿರ ಜನರಿರುವ ವಿಶೇಷ ತರಬೇತಿಯನ್ನು ಪಡೆದಿರತಕ್ಕಂಥ

ವಿಶೇಷವಾದಂಥ ಒಂದು ಪೋಲೀಸ್ ಪಡೆಯನ್ನು ನೇಮಕ ಮಾಡಬೇಕೆಂದು ಒತ್ತಾಯಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಹೆಚ್. ಕೌಜಲಗಿ : (ಬೈಲ ಹೊಂಗಲ) : ಮಾನ್ಯ ಅಧ್ಯಕ್ಷರೇ, ಇವತ್ತಿನದಿವಸ ಹೇಳುವುದಾದರೆ ಈ ಘಟನೆ ನಡೆದುದು 20ನೇ ತಾರೀಖು. 20ನೇ ತಾರೀಖು ಆದನಂತರ ನಮ್ಮ ಡಿಸ್ಟ್ರಿಕ್ಟ ಮಿನಿಸ್ಟರ್ ಅಲ್ಲಿಗೆ ಹೇದುದು 25ಕ್ಕೆ ಹೈಯರ್ ಆಫೀಸರ್‌ಗಳು ಆದರೂ ಸಹಿತ ಬೆಳಗಾಮ್, ಬಿಜಾಪುರ ಮತ್ತು ಹುಬ್ಬಳ್ಳಿಗೆ ಕೂಡಲೇ ಹೋಗಿದ್ದರೆ ಇಷ್ಟೊಂದು ಅನಾಹುತ ಆಗುತ್ತಿರಲಿಲ್ಲವೆಂದು ನನಗನ್ನಿಸುತ್ತದೆ. ಎರಡನೆಯದಾಗಿ ಮಾನ್ಯ ಸಚಿವರು ಹೋದದ್ದು 25ನೇ ತಾರೀಖು. ಆದೂ ಸಹ ಅವರು ಹೋಗಿದ್ದು ಒಂದು ಸ್ಕೂಲ್ ಪಂಕ್ಷನ್‌ಗೆ ಭಾಗವಹಿಸಲು ಹೋಗಿದ್ದರೇ ಹೊರತು ಇದರ ಸಲುವಾಗಿ ಹೋಗಿರಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮಲ್ಲಾರಿಗೌಡ ಪಾಟೀಲರೆ, ತಮ್ಮ ಮೇಲೆ ಮಾನ್ಯ ಸದಸ್ಯರು ಆರೋಪ ಮಾಡುತ್ತಿದ್ದಾರೆ.

ಶ್ರೀ ಎಸ್.ಹೆಚ್. ಕೌಜಲಗಿ : ಹಾನಿಯಾಗಿರುವುದು ನೋಡಿದರೆ ಕಂಡಾಪಟ್ಟೆಯಾಗಿದೆ. ಈಗ ತಾವು ಅಲ್ಲಿ 14-15 ಲಕ್ಷ ರೂಪಾಯಿಗಳಷ್ಟು ಹಾನಿಯಾಗಿದೆ ಎಂದು ಹೇಳಿದ್ದೀರಿ, ಆದರೆ 14-15 ಲಕ್ಷ ರೂಪಾಯಿಗಳಲ್ಲ, ನಾಲ್ಕು ಕೋಟಿ ರೂಪಾಯಿಗಳಿಗೂ ಮೀರಿ ಹಾನಿಯಾಗಿದೆ. ಮತ್ತೆ ಒಬ್ಬರಲ್ಲ, ಮೂರುಮಂದಿ ಸತ್ತಿದ್ದಾರೆ. ಮೂರುಮಂದಿ ಸತ್ತಿದ್ದರೂ ಸಹ ಸರ್ಕಾರದ ರೆಕಾರ್ಡಿನಲ್ಲಿ ಒಬ್ಬರೇ ಎಂದಿದೆ. ಇದು ಸರಿಯಲ್ಲ, ಈ ಬಗ್ಗೆ ವೆರಿಫೈ ಮಾಡಿಸಬೇಕು. ಮತ್ತೆ ಅಲ್ಲಿಗೆ ಸ್ಪೆಷಲ್ ಪೋಲೀಸ್ ಸಿಬ್ಬಂದಿಯನ್ನು ಹಾಕಬೇಕು. ಬೆಳಗಾಮ್ ಮತ್ತು ಹುಬ್ಬಳ್ಳಿಯಲ್ಲಿ ಪೋಲೀಸ್ ಸಿಬ್ಬಂದಿಯ ಕೊರತೆ ಬಹಳಷ್ಟು ಇದೆ. ಸೆನ್‌ಸಿಟೀವ್ ಇರುವ ಕಡೆಗಳಲ್ಲಿ ಇದಾಗಲೇಬೇಕಾಗುತ್ತದೆ. ತಾವು ಮೊದಲೇ ಮುಂಜಾಗ್ರತಾ ಕ್ರಮ ತೆಗೆದುಕೊಂಡಿದ್ದರೆ ಇಂಥ ಒಂದು ಘಟನೆಯನ್ನು ತಪ್ಪಿಸಬಹುದಾಗಿತ್ತು ಎಂದು ನನಗನ್ನಿಸುತ್ತದೆ. ಆದಕಾರಣ ಇವತ್ತಿನದಿವಸ ನಮಗೆ ಎಫ್.ಐ.ಆರ್. ಕೊಟ್ಟಿರಿ ಇನ್ನು ಒಂದು ವಾರದೊಳಗೆ ಚಾರ್ಜ್‌ಶೀಟ್ ಕೊಡುವ ಮೊದಲು ಮತ್ತೊಂದು ಸರಿ ಕೂಲಂಕುಶವಾಗಿ ವಿಚಾರಮಾಡಿ ಅಲ್ಲಿ ಏನು ತಪ್ಪು ನಡೆದಿದೆ ಎಂಬುದನ್ನು ಕಂಡುಹಿಡಿಯಬೇಕು. ಮುಖ್ಯವಾಗಿ ಇದು ಇಂಥ ಒಂದು ಗೊಂದಲಗಳನ್ನು ಮಾಡುವಂಥ ಮಂದಿಯೇ ಇರುತ್ತಾರೆ. ಅವರನ್ನು ಮೊದಲು ದಸ್ತಗಿರಿ ಮಾಡಿದರೆ ಅನುಕೂಲವಾಗುತ್ತದೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ (ಗೃಹಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ದೇಶಪಾಂಡೆಯವರು ಹುಬ್ಬಳ್ಳಿ ಕಾರ್ಪೊರೇಟರ್ ಒಬ್ಬರಿಗೆ ಅನ್ಯಾಯವಾಗಿ, ಒಬ್ಬ ಸಬ್‌ಇನ್‌ಸ್ಪೆಕ್ಟರ್ ಒಬ್ಬ ಕಾನ್‌ಸ್ಟೇಬಲ್ ಸೇರಿ ಹೊಡೆದಿದ್ದಾರೆಂದು ನನ್ನ ಗಮನಕ್ಕೆ ತಂದಿದ್ದಾರೆ. ಅಲ್ಲಿಗೆ ನಮ್ಮ ಡಿ.ಸಿ. ಲಾ ಅಂಡ್ ಆರ್ಡರ್ ಅವರು ಕೂಡ ಹೋಗುತ್ತಿದ್ದಾರೆ. ನಾನು ಈ ಸದನ ನಡೆಯುತ್ತಿದ್ದುದರಿಂದ ಅಲ್ಲಿಗೆ ಖುದ್ದಾಗಿ ಹೋಗಲಿಕ್ಕೆ ಆಗಲಿಲ್ಲ. ಮಾನ್ಯ ಸದಸ್ಯರಾದ ವಾಟಾಳ್‌ನಾಗರಾಜ್‌ರವರು ಪ್ರಸ್ತಾಪ ಮಾಡಿದಂತೆ ಆ ಎರಡು ಸ್ಥಳಗಳಿಗೆ ಭೇಟಿಕೊಡುವಂಥ ಕಾರ್ಯಕ್ರಮವನ್ನು ನಾನು ಇಟ್ಟುಕೊಂಡಿದ್ದೇನೆ. ಎಲ್ಲೆಲ್ಲಿ ನಮ್ಮ ಪೋಲೀಸ್ ಅಧಿಕಾರಿಗಳು ಸುಮ್ಮಸುಮ್ಮನೆ ದಬ್ಬಾಳಿಕೆ ಮಾಡಿದ್ದಾರೆ, ಪಬ್ಲಿಕ್ ರೆಪ್ರೆಸೆಂಟೆಟೀವ್ ಮೇಲೆ ದಬ್ಬಾಳಿಕೆ ಮಾಡಿದ್ದಾರೆಂದು ನನ್ನ ಗಮನಕ್ಕೆ ತಂದಿದ್ದಾರೆ. ಅದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಇನ್ನು ಎರಡನೆಯದಾಗಿ ಮಾನ್ಯ ವಾಟಾಳ್‌ನಾಗರಾಜ್‌ರವರು ಪೋಲೀಸ್ ಅಧಿಕಾರಿಗಳು

ಕೊಟ್ಟಿರುವ ವರದಿಯ ಆಧಾರದಮೇಲೆ ಹೇಳುತ್ತಿದ್ದೀರಿ ಎಂದು ಹೇಳಿದ್ದಾರೆ. ಪೋಲೀಸ್ ಅಧಿಕಾರಿಗಳು ಈ ವರದಿ ಕೊಟ್ಟಿದ್ದಾರೆ ನಾನು ಕೂಡ ಮಾನ್ಯ ಮಲ್ಲಾರಿಗೌಡ ಪಾಟೀಲರನ್ನು ಖುದ್ದಾಗಿ ಕಳುಹಿಸಿದ್ದೇನೆ. ಅವರು ಶಾಲಾ ಸಮಾರಂಭಕ್ಕೆ ಹೋಗಿದ್ದರೆಂದು ಮಾನ್ಯ ಕೌಜಲಗಿಯವರು ಹೇಳಿದ್ದಾರೆ. ಅದು ಸರಿಯಲ್ಲ. ಈ ಘಟನೆ ಸಂಭವಿಸಿದಾಗ ಹೌಸ್ ನಡೆಯುತ್ತಿತ್ತು. ಹೌಸ್ ನಡೆಯುತ್ತಿರುವಾಗ ನಾನು ಹೋಗಿಬರಲು ಸಾಧ್ಯವಾಗುವುದಿಲ್ಲವೆಂದು ಮಾನ್ಯ ಮಲ್ಲಾರಿಗೌಡ ಪಾಟೀಲ್ ಅವರಿಗೆ ಹೇಳಿ ಕಳುಹಿಸಿದ್ದೆ. ಅವರೂ ಕೂಡ ಹೋಗಿ ಎಲ್ಲ ಕಡೆಗೆ ತಿರುಗಾಡಿಕೊಂಡು, ಜನರನ್ನು ಭೇಟಿಮಾಡಿ ಸಮಾಲೋಚನೆ ಮಾಡಿದ್ದಾರೆ. ಜೊತೆಗೆ ಅವರು ಪೋಲೀಸ್‌ನವರು ತಮ್ಮದೆ ಆದ ವರದಿಯನ್ನು ಕೊಡುತ್ತಾರೆಂದು ತಿಳಿದು ಡಿವಿಜನ್‌ಲ್ ಕಮೀಷನರ್ ನೇತೃತ್ವದಲ್ಲಿ ಶಾಸಕರನ್ನು ಸಹ ಒಳಗೊಂಡಂಥೆ ಸಮಿತಿಯನ್ನು ರಚನೆ ಮಾಡಿ ಎಲ್ಲ ಕಡೆಗೆ ಭೇಟಿ ಕೊಟ್ಟು ನಂತರ ಸಮಗ್ರವಾದ ಒಂದು ವರದಿಯನ್ನು ಒಂದು ವಾರದಲ್ಲಿ ಕೊಡಬೇಕೆಂದು ಅವರೂ ಕೂಡ ಹೇಳಿದ್ದಾರೆ. ಇವತ್ತು ಎಲ್ಲ ಕಡೆಗೂ ಗೃಹಸಚಿವರೇ ಹೋಗುವುದಕ್ಕಾಗುವುದಿಲ್ಲ, ಅವರೂ ಕೂಡ ಸರ್ಕಾರದ ಮಂತ್ರಿಗಳಾಗಿ ಅಲ್ಲಿಗೆ ಹೋಗಿ ಆಶ್ವಾಸನೆಯನ್ನು ಕೊಟ್ಟು ಬಂದಿದ್ದಾರೆ. ಅದನ್ನು ತಾವು ಪ್ರಶಂಸೆ ಮಾಡಬೇಕು. ಮತ್ತು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಬೇಕು. ಇವತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಾ ಅಸ್ತಿಪಾಸ್ತಿ ನಷ್ಟದ ಬಗ್ಗೆ ನಿರಪರಾಧಿಗಳ ಬಗ್ಗೆ ಹೇಳಿದರು. ನಾನು ಈ ಬಗ್ಗೆ ಡಿ.ಐ.ಜಿ.ಯವರಿಗೆ ಮತ್ತು ಎಸ್‌ಪಿ ಅವರಿಗೆ ಆ ಸ್ಥಳಗಳಿಗೆ ಖುದ್ದಾಗಿ ಭೇಟಿ ಕೊಟ್ಟು ಪೂರ್ಣವಾದ ರಿಪೋರ್ಟ್‌ನ್ನು ತರಬೇಕೆನ್ನುವ ರೀತಿಯಲ್ಲಿ ನಾನು ಈಗಾಗಲೇ ಆಜ್ಞೆಯನ್ನು ಮಾಡಿದ್ದೇನೆ.

ಎರಡನೆಯದಾಗಿ, ಶಾಂತಿ ಸಭೆ ಮಾಡತಕ್ಕ ಇಂಟಿಗ್ರೇಷನ್ ಕೌನ್ಸಿಲ್ ಮೀಟಿಂಗ್ ಮೊನ್ನೆ ನಡೆದಿದೆ. ಆದರೆ ಅಂದು ದೀರ್ಘವಾಗಿ ಚರ್ಚೆ ಆಗಲಿಲ್ಲ. ಏಕೆಂದರೆ ಬಹಳಷ್ಟು ಮಂದಿ ಸದಸ್ಯರುಗಳಿಗೆ ತರಾತುರಿಯಾಗಿ ನಡೆದ ಸಭೆಗೆ ಬರಲಿಕ್ಕೆ ಆಗಲಿಲ್ಲ. ಈ ಬಗ್ಗೆ ಮಾನ್ಯ ಸಿಂಧ್ಯರವರು ಪ್ರಸ್ತಾಪ ಮಾಡಿದ್ದಾರೆ. ನಾವು ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್ ಎಂದು ಏನು ಮಾಡಿದ್ದೇವೆ ಅದು ಒಂದು ವರ್ಷದಲ್ಲಿ ನಾಲ್ಕು ಸಲ ಕೊಡಬೇಕೆಂದು ಈಗಾಗಲೇ ಮುಖ್ಯ ಮಂತ್ರಿಗಳು ತೀರ್ಮಾನ ತೆಗೆದುಕೊಂಡಿದ್ದಾರೆ. ಆ ಸಭೆಯನ್ನು ಇಷ್ಟರಲ್ಲೇ ಕರೆಸುತ್ತಿದ್ದೇವೆ. ನಾವು ಕೊಟ್ಟಂತಹ ವರದಿ ಬಗ್ಗೆ ಮಾನ್ಯ ಎಡಿಯೂರಪ್ಪನವರು ಅಭಿನಂದನೆ ಸಲ್ಲಿಸಿದ್ದಾರೆ. ತಾವು ನೋಡಿರಬಹುದು, ಯಾರಿಗೂ ಮುಚ್ಚುಮರೆ ಇಲ್ಲದೆ ಘಟನೆಗಳು ಏನು ನಡೆದಿದೆ ಅದರ ಬಗ್ಗೆ ಈ ಸದನದಲ್ಲಿ ಹೇಳಿಕೆ ಕೊಡಬೇಕಾದರೆ ಸ್ವಲ್ಪ ಸಮಯ ಬೇಕೆಂದು ಕೇಳಿದೆ. ಏಕೆಂದರೆ ಮಂತ್ರಿತಗಳು ಸರ್ಕಾರದ ಪರವಾಗಿ ಸ್ಪಷ್ಟವಾದ ಚಿತ್ರವನ್ನು ಕೊಡಬೇಕೆಂದು ಸಮಯ ಕೇಳಿದ್ದೆ. ಇದರಲ್ಲೇನು ಮುಚ್ಚುಮರೆ ಮಾಡಿಲ್ಲ, ಘಟನೆ ಆದಮೇಲೆ ಸಹ ಏನಾಗಿದೆ ಎಂದು ನೋಡುವುದು ಒಳ್ಳೆಯದು. ನಾನು ಇಂದು 314 ಮಂದಿ 9 ತಿಂಗಳ ಆರ್ಮ್ಡ್ ರಿಸರ್ವ್ ಪೋಲೀಸ್ ಟ್ರೈನಿಂಗ್ ಪಡೆದವರ ಪೆರೇಡ್‌ಗೆ ಹೋಗಿದ್ದೆ. ಅಲ್ಲಿ ಹೇಳಿದೆ. ನೀವು ಏನು ಪ್ರತಿಜ್ಞೆ ಮಾಡಿದ್ದೀರಿ ಅದರಂತೆ ಮುಂದೆ ಬರತಕ್ಕ ಜೀವನದಲ್ಲಿ ನಿಮಗೆ ಪ್ರಾಮಾಣಿಕತೆಯಿಂದ, ದಕ್ಷತೆಯಿಂದ ಕೆಲಸ ಮಾಡತಕ್ಕ ಅವಕಾಶ ಇದೆ ಎಂದು. ಆದರೆ ಪೋಲೀಸ್ ಇಲಾಖೆ ಎಷ್ಟೇ ಚೆನ್ನಾಗಿ ಕೆಲಸ ಮಾಡಿದರೂ, ಸಾರ್ವಜನಿಕರಲ್ಲಿ ಪೋಲೀಸರದ್ದೇ ಏನೋ ತಪ್ಪಾಗಿರಬೇಕೆಂಬ ಭಾವನೆ ಬರುತ್ತದೆ. ಬೆಳಗಾಂ ವಿಭಾಗಕ್ಕೆ ಎಫಿಷಿಯಂಟ್ ಆಗಿ ಕೆಲಸ ಮಾಡತಕ್ಕ ಡಿ.ವೈ.ಎಸ್.ಪಿ.ಯನ್ನು ಹಾಕಿದ್ದೇವೆ, ಮತ್ತು ಅವರಿಗೆ

ಎಲ್ಲ ವಿಷಯವನ್ನು ಹೇಳಿದ್ದೇವೆ. ಕೆಲವು ಸಂದರ್ಭಗಳಲ್ಲಿ ಮತೀಯ ಗಲಭೆಗಳು ಶುರುವಾಗಲು ಹೇಗೆ ಪ್ರೇರಣೆಯಾಗುತ್ತದೆಂದು ಹೇಳುವುದಕ್ಕೆ ಆಸಾಧ್ಯ. ಇದನ್ನೆಲ್ಲ ನ್ಯಾಷನಲ್ ಇಂಟಿಗ್ರೇಷನ್ ಸಮಿತಿಯಲ್ಲಿ ಕುಳಿತು ವಿಚಾರ ಮಾಡೋಣ. ತಾವು ಸೂಕ್ತ ಸಲಹೆಯನ್ನು ಕೊಟ್ಟಿದ್ದೀರಿ, ಅದರ ಬಗ್ಗೆ ಗಮನ ಕೊಡುತ್ತೇನೆ. ಮತ್ತು ಸ್ಥಳಕ್ಕೆ ಕೂಡ ಭೇಟಿ ಕೊಡುತ್ತಿದ್ದೇನೆ. ಮಾನ್ಯ ಎಡಿಯೂರಪ್ಪನವರು ಹೇಳಿದಂತೆ ಇದರ ಬಗ್ಗೆ ಯಾರೇ ಇರಲಿ, ನಿರ್ದಾಕ್ಷಿಣ್ಯವಾಗಿ ಅವರ ಮೇಲೆ ಸರ್ಕಾರ ಖಂಡಿತ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದುವರೆಗೆ ಈ ರೀತಿ ಘಟನೆಗಳು ನಡೆದಾಗ ಈ ಸದನದಲ್ಲಿ ನ್ಯಾಯಾಂಗ ತನಿಖೆಗೆ ಅವಕಾಶ ಮಾಡಿಕೊಟ್ಟಿದ್ದು ಉಂಟು. ಅಲ್ಲಿ ಒಬ್ಬ ಸತ್ತಿದ್ದಾನೆ. ಈ ಘಟನೆಗಳು ನಿರೀಕ್ಷೆ ಮೀರಿ ನಡೆದಿದೆ. ಅಲ್ಪಸಂಖ್ಯಾತರಿಗೆ ರಕ್ಷಣೆ ಕೊಡುವುದು ಪೋಲೀಸರ ಕರ್ತವ್ಯ ನಿಜ. ಆದರೆ ಬಹುಸಂಖ್ಯಾತರು ಹಬ್ಬ ಹರಿದಿನ ಮೆರವಣಿಗೆಗಳನ್ನು ಮಾಡದೇ ಇರುವ ಸ್ಥಿತಿಗೆ ಬಂದಿದೆ. ಅದಕ್ಕೋಸ್ಕರ ಪ್ರತಿಭಟನೆ ಮಾಡಬೇಕಾಗುತ್ತದೆ. ಇದನ್ನು ಬಿಗಿ ಮಾಡಿ ಆ ಧೈರ್ಯವನ್ನು ಸರ್ಕಾರ ಮಾಡಬೇಕು. ಇಲ್ಲದಿದ್ದರೆ ಪತಿಭಟನೆ ಮಾಡಬೇಕಾಗುತ್ತದೆ ಈ ಸರ್ಕಾರಕ್ಕೆ ನ್ಯಾಯ ದೊರಕಿಸಿಕೊಡುವ ಕಳಕಳಿ ಇಲ್ಲ. ನಾನು ಮೊದಲ ಸಾರಿಗೆ ಸ್ವಾಗತ ಮಾಡಿದೆ. ನಿಜಕ್ಕೂ ನಿಮ್ಮ್ರಥ ಮಂತ್ರಿಗಳು ಧೈರ್ಯ ಮಾಡಿದ್ದರಿಂದ ಶಾಂತ ವಾತಾವರಣ ಮಾಡಿಸುವ ಪ್ರಯತ್ನವನ್ನು ಸರ್ಕಾರ ಮತ್ತು ಪೋಲೀಸ್ ಇಲಾಖೆ ಮಾಡಿದೆ. ಯಾವ ನಿರಪರಾಧಿಗಳಿಗೂ ಅನ್ಯಾಯವಾಗಬಾರದು. ಸತ್ಯ ಹೊರಗೆ ಬರಲಿ ಅದಕ್ಕಾಗಿ ತಾವು ನ್ಯಾಯಾಂಗ ತನಿಖೆಗೆ ಒಪ್ಪಿಕೊಳ್ಳಬೇಕು.

ಶ್ರೀ ಆರ್.ವಿ ದೇಶಪಾಂಡೆ ; ಕಾಂಪನ್‌ಸೇಷನ್ ಯಾವಾಗ ಕೊಡುತ್ತೀರಿ?

ಶ್ರೀ ಧರ್ಮಸಿಂಗ್ : ಎಷ್ಟು ಜನ ಸತ್ತಿದ್ದಾರೆ ಎಷ್ಟು ಆಸ್ತಿಪಾಸ್ತಿಗೆ ಜಖಂ ಆಗಿದೆ ಎಂಬ ವಿವರ ಒಂದು ವಾರದಲ್ಲಿ ಬರುತ್ತದೆ. ನಾವು 15 ದಿನಗಳಲ್ಲಿ ಕಾಂಪನ್‌ಸೇಷನ್ ಕೊಡುವ ವ್ಯವಸ್ಥೆ ಮಾಡುತ್ತೇನೆ. ಈಗಾಗಲೇ ಕರ್ನಾಟಕ ರಾಜ್ಯದಲ್ಲಿ 3 ಕೋಟಿ ರೂಪಾಯಿಗಳನ್ನು ವಿತರಣೆ ಮಾಡಿದ್ದೇವೆ. ಶ್ರೀ ಯಡಿಯೂರಪ್ಪನವರು ನ್ಯಾಯಾಂಗ ತನಿಖೆ ಆಗಬೇಕೆಂದು ಹೇಳಿದ್ದಾರೆ ಆದರೆ ನ್ಯಾಯಾಂಗ ತನಿಖೆ ಆಗತಕ್ಕ ಅವಶ್ಯಕತೆ ಇಲ್ಲ. ಅಲ್ಲಿ ಏನಾಗಿದೆ ಎಂದು ಸ್ಪಷ್ಟವಾದ ವರದಿಯನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಪ್ರಾಪರ್ಟಿ ಲಾಸ್ ಆಗಿದ್ದರೆ ಎಲ್ಲಾ ಕಡೆಗೆ ಪರಿಹಾರ ಕೊಡುತ್ತೇವೆಂದು ಹೇಳಿದ್ದೇವೆ. ನಿರಪರಾಧಿಗಳು ಯಾರಿದ್ದಾರೆ ಅವರನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದೇವೆ. ಅಲ್ಲದೆ ನಾನೇ ಖುದ್ದಾಗಿ ಸ್ಥಳಕ್ಕೆ ಹೋಗಿಬರುತ್ತೇನೆಂದು ಹೇಳಿದ್ದೇನೆ.

ಶ್ರೀ ಬಿ.ಎಸ್ ಯಡಿಯೂರಪ್ಪ : ವ್ಯವಸ್ಥಿತವಾದ ಸಂಚು ಏನಿದೆ ಅದು ತನಿಖೆಯಿಂದ ಬಯಲಾಗಲಿ.

ಶ್ರೀ ಧರ್ಮಸಿಂಗ್ ಎಲ್ಲೆಲ್ಲಿ ಏನೇನು ಆಗಿದೆ ಎಂದು ಸ್ಪಷ್ಟವಾಗಿ ಹೇಳಿದ ಮೇಲೆ ನ್ಯಾಯಾಂಗ ತನಿಖೆ ಮಾಡುವುದಕ್ಕೆ ಬರುವುದಿಲ್ಲ. ಸಂಬಂಧ ಪಟ್ಟ ಉಸ್ತುವಾರಿ ಮಂತ್ರಿಗಳು ಕೂಡ ಸ್ಥಳಕ್ಕೆ ಹೋಗಿಬಂದಿದ್ದಾರೆ. ಮಾನ್ಯ ಸಿಂಧ್ಯರವರ ಏನು ಸಲಹೆ ಕೊಟ್ಟಿದ್ದಾರೆಂದರೆ ಇವತ್ತು ಕರ್ನಾಟಕ ರಾಜ್ಯದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಪೋಲೀಸರು ಇಲ್ಲ ಎಂದು. 2455 ಜನಸಂಖ್ಯೆ ಇರುವ ಜಾಗದಲ್ಲಿ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ನಮ್ಮ ರಾಜ್ಯದಲ್ಲಿ ಇದ್ದಾನೆ ಪೋಲೀಸರ ಸಂಖ್ಯೆ

ಬಹಳ ಕಡಿಮೆ ಇದೆ ಎಂದು ಹೇಳಿದ್ದಾರೆ. ಈ ಒಂದು ಇಲಾಖೆಗೆ ಹೆಚ್ಚಿನ ರೀತಿಯಲ್ಲಿ ಪೋಲೀಸರನ್ನು ನೇಮಿಸಬೇಕಾಗಿದೆ. ಇವತ್ತಿನ ದಿವಸ ವಿಶೇಷವಾಗಿ ಎನ್.ಟಿ.ಟಿ.ಇ. ನಕ್ಸಲೈಟ್ಸ್ ಎಲ್ಲ ಬರುತ್ತಿದ್ದಾರೆ. ಈ ರೀತಿ ಬೇರೆ ಬೇರೆ ದುಷ್ಕರ್ಮಿಗಳು ಬರತಕ್ಕ ಸಂದರ್ಭದಲ್ಲಿ ಇಲಾಖೆಯನ್ನು ಬಲಪಡಿಸಬೇಕೆಂದು ಸೂಚನೆ ಕೊಟ್ಟಿದ್ದಾರೆ. ಈಗಾಗಲೇ 91-92 ನೇ ಸಾಲಿನಲ್ಲಿ ಕೆಲವು ಹುದ್ದೆಗಳನ್ನು ಭರ್ತಿ ಮಾಡತಕ್ಕ ಕಾರ್ಯಕ್ರಮ ಹಾಕಿ ಕೊಂಡಿದ್ದೇವೆ. ಆದರೂ ಅದು ಸಾಲದು. ಆದರೂ ಕೂಡ ಮೊನ್ನೆ ಕೇಂದ್ರದ ಗೃಹಮಂತ್ರಿಗಳಾದ ಜಾಕಬ್ ಅವರು ಬಂದಾಗ ಕೂಡ ಪೋಲೀಸ್ ಡಿಪಾರ್ಟ್‌ಮೆಂಟ್ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ನಲ್ಲಿರುವುದನ್ನು ತೆಗೆದು ಅದನ್ನು ಪ್ಲಾನ್ ಐಟಂನಲ್ಲಿ ಇನ್‌ಕ್ಲೂಡ್ ಮಾಡಬೇಕು ಎಂದು ನಾವು ಹೇಳಿದೆವು. ಪ್ರಣಬ್ ಮುಖರ್ಜಿಯವರಿಗೂ ಸಹ ಈ ಬಗ್ಗೆ ಮನವಿ ಮಾಡಿದ್ದೇನೆ. ಈ ಇಲಾಖೆಯನ್ನು ಹೆಚ್ಚಿನ ರೀತಿಯಲ್ಲಿ ಸ್ಟ್ರೆಂತ್‌ನ್ ಮಾಡುವುದಕ್ಕೆ ಪ್ರೊಪೋಸಲ್ ಸರ್ಕಾರಕ್ಕೆ ಬಂದಾಗ ಮಾಡುತ್ತೇವೆ ಎಂಬ ಆಶ್ವಾಸನೆಯನ್ನು ನಾವು ಕೊಟ್ಟಿದ್ದೇವೆ. ನಾಲ್ಕು ಮತ್ತು 5 ನೇ ತಾರೀಖು ದೆಹಲಿಯಲ್ಲಿ ಪ್ರಧಾನ ಮಂತ್ರಿಗಳು ಒಂದು ಮೀಟಿಂಗ್ ಕರೆಸಿದ್ದಾರೆ. ನಾನೂ ಕೂಡ ಮುಖ್ಯಮಂತ್ರಿಗಳ ಜೊತೆ ಅಲ್ಲಿಗೆ ಹೋಗುತ್ತಿದ್ದೇನೆ. ಪ್ರೊಪೋಸಲ್ ಕೂಡ ಈಗಾಗಲೇ ಇಟ್ಟಿದ್ದೇವೆ. ಮುಖ್ಯವಾಗಿ ಗಲಾಟೆಯಾಗುವ ಕಡೆ ಹೆಚ್ಚಿನ ಸಂಖ್ಯೆಯಲ್ಲಿ ಸಿಬ್ಬಂದಿಯನ್ನು ಮಾಡಬೇಕು. ಸಂಖ್ಯೆ ಬಲಪಡಿಸಬೇಕಾಗಿದೆ. ಸ್ಪೆಷಲ್ ಟಾಸ್ಕ್ ಫೋರ್ಸ್ ರಚನೆಮಾಡುವುದನ್ನು ಕೂಡ ಗಮನದಲ್ಲಿಟ್ಟುಕೊಂಡಿದ್ದೇವೆ.

ಶ್ರೀ ಬಿ.ಎಸ್. ಯಡೀಯೂರಪ್ಪ : ಮಾನ್ಯ ಅಧ್ಯಕ್ಷರೇ ನ್ಯಾಯಾಂಗ ತನಿಖೆಗೆ ನಾವು ಒತ್ತಾಯ ಮಾಡಿದ್ದೆವು. ಅದು ಆಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಇವತ್ತು ಹುಬ್ಬಳಿ ಮತ್ತು ಬೆಳಗಾಂನಲ್ಲಿ ಜನ ಭಯಭೀತರಾಗಿದ್ದಾರೆ. ನ್ಯಾಯಾಂಗ ತನಿಖೆಯಿಂದ ಅನೇಕ ಸಂಗತಿಗಳು ಹೊರಗಡೆ ಬರುವುದಿದೆ. ನೀವು ಜನರ ಕೆಲಸ ಮಾಡುವುದಕ್ಕೆ ಸಿದ್ದರಿಲ್ಲ. ಜನರಿಗೆ ರಕ್ಷಣೆ ಕೊಡುವುದಕ್ಕೆ ನಿಮಗೆ ಕಳಕಳಿ ಇಲ್ಲ ಈ ನೀತಿಯನ್ನು ಪ್ರತಿಭಟನೆ ಮಾಡುತ್ತೇವೆ. ನ್ಯಾಯಾಂಗ ತನಿಖೆಮಾಡುವುದಕ್ಕೆ ನೀವು ಹಿಂದೆ ಮುಂದೆ ಮೋಡುತ್ತಿದ್ದೀರಿ. ನಿಮ್ಮ ಸರ್ಕಾರದ ನೀತಿಯನ್ನು ಪ್ರತಿಭಟನೆ ಮಾಡಿ ನಾವು ವಾಕ್ ಔಟ್ ಮಾಡುತ್ತಿದ್ದೇವೆ.

(ಭಾರತೀಯ ಜನತಾ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಪ್ರಕಟಣೆ

ಗೈರುಹಾಜರಿಗೆ ಅನುಮತಿ ಕೋರಿಕೆ

ಉಪಾಧ್ಯಕ್ಷರು : ವಿಧಾನ ಸಭೆಯ ಸದಸ್ಯರಾದ ಶ್ರೀ ಎಂ. ಸಿದ್ದಮಾದಯ್ಯನವರು ಬೌರಿಂಗ್ ಆಸ್ಪತ್ರೆಯಲ್ಲಿ ಒಳರೋಗಿಯಾಗಿ 2 ತಿಂಗಳಿಂದ ಚಿಕಿತ್ಸೆ ಪಡೆಯುತ್ತಿರುವುದರಿಂದ ವಿಧಾನಸಭೆಯ ಸದ... ಉಪವೇಶನಗಳಿಗೆ ಗೈರುಹಾಜರಾಗಲು ಅನುಮತಿ ಕೋರಿ ಪತ್ರ ಬರೆದಿದ್ದಾರೆ. ಶ್ರೀ ಎಂ. ಸಿದ್ದಮಾದಯ್ಯ ಅವರು (ಪ್ರಸಕ್ತ ಅಧಿವೇಶನದ ಉಪವೇಶನಗಳಿಗೆ) ಸದನಕ್ಕೆ ಗೈರುಹಾಜರಾಗಲು ಸದನವು ಅನುಮತಿ ನೀಡುವುದಕ್ಕೆ ಅಪೇಕ್ಷಿಸುತ್ತದೆಯೇ? (ಮಾನ್ಯ ಸದಸ್ಯರಾರೂ ನಿರಾಕರಿಸಲಿಲ್ಲ)

ಉಪಾಧ್ಯಕ್ಷರು : ಗೈರುಹಾಜರಿಗೆ ಅನುಮತಿ ನೀಡಲಾಗಿದೆ.